ನೋಡಲಿ. ಮಾನ್ಯ ಕುಮಾರಸ್ವಾಮಿ ಎರಡೂವರೆ ಸಾವಿರ ಕೋಟಿ ರೂ.ಗಳ ಸಾಲ ಮನ್ನಾ ಮಾಡಿದರು. ಆದರ ಬದಲು ಬೇರೆ ಕೆಲಸಗಳನ್ನು ಮಾಡಬಹುದಾಗಿತ್ತು ಎಂದು ನನ್ನ ಹತ್ತಿರ ಹೇಳಿದ್ದರು. ಇದರಲ್ಲಿ ಸಂಪೂರ್ಣ ಚುನಾವಣೆ ಗಿಮಿಕ್ಸ್ ಇರುವುದರಿಂದ, ಈ ಸರ್ಕಾರದ 4 ವರ್ಷದಿಂದ ಏನು ಕೊಳೆ ಮಾಡಿದ್ದಾರೋ, ಅದನ್ನು ತೊಳೆಯುವುದಕ್ಕೋಸ್ಕರ ಮಾಡಿದ್ದಾರೆಯೇ ಹೊರತು ರೈತರ ಕಣ್ಣೀರು ಒರೆಸುವ ದೃಷ್ಟಿಯಿಂದಲ್ಲ. ಈ ಸರ್ಕಾರ ಅವರು ಮಾಡಿರುವಂತಹ 4 ವರ್ಷದ ಕೊಳೆಯನ್ನು ತೊಳೆಯುವುದಕ್ಕೋಸ್ಕರ ಈ ಸಾಲ ಮನ್ನಾ ಮಾಡಿದೆಯೇ ಹೊರತು, ಬೇರೇನೂ ಇಲ್ಲ. ಆದ ಕಾರಣ ಪ್ರತಿಭಟನೆ ಮಾಡುತ್ತಿದ್ದೇವೆ.

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 53 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 25.07.2012 ರಂದು ಬುಧವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು).

ಅನುಬಂಧ–2

ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದರಾಮಯ್ಯ ಹಾಗೂ ಇತರೆ ಶಾಸಕರು ನಿಯಮ 69 ರಡಿಯಲ್ಲಿ ಬರ–ಪರಿಹಾರಕ್ಕೆ ಸಂಬಂಧಿಸಿದಂತೆ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಕಂದಾಯ ಸಚಿವರ ಉತ್ತರ.

2011–12ರ ಸಾಲಿನಲ್ಲಿ ಸರ್ಕಾರವು 24 ಜಿಲ್ಲೆಗಳ 123 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಿದೆ.

ಜೂನ್ 1 ರಿಂದ ಜುಲೈ 22ರ ಅವಧಿಗೆ ರಾಜ್ಯದಲ್ಲಿ ವಾಡಿಕೆ ಮಳೆ ಪ್ರಮಾಣವು 393 ಮಿ.ಮಿ. ಆಗಿದ್ದು ಪ್ರಸ್ತುತ ಅವಧಿಯಲ್ಲಿ 244 ಮಿ.ಮಿ. ಮಳೆಯಾಗಿದ್ದು ಶೇ. 38 ರಷ್ಟು ಕೊರತೆ ಕಂಡುಬಂದಿರುತ್ತದೆ. ರಾಜ್ಯದ 24 ಜಿಲ್ಲೆಗಳ 147 ತಾಲ್ಲೂಕುಗಳ 577 ಹೋಬಳಿಗಳಲ್ಲಿ ಸಾಧಾರಣದಿಂದ ತೀವ್ರ

ಮಳೆ ಕೊರತೆ ಕಂಡುಬಂದಿರುತ್ತದೆ. ಉಳಿದ 6 ಜಿಲ್ಲೆಗಳ 29 ತಾಲ್ಲೂಕುಗಳ 170 ಹೋಬಳಿಗಳಲ್ಲಿ ವಾಡಿಕೆ ಅಥವಾ ಅಧಿಕ ಮಳೆಯಾಗಿರುತ್ತದೆ.

ಕಳೆದ ವಾರ (ಜುಲೈ 16 ರಿಂದ 22ರವರೆಗೆ) ರಾಜ್ಯದ ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನಲ್ಲಿ ಉತ್ತಮ ಮಳೆಯಾಗಿರುತ್ತದೆ. ಈ ಅವಧಿಗೆ ರಾಜ್ಯದಲ್ಲಿ ವಾಡಿಕೆ ಮಳೆ ಪ್ರಮಾಣವು 65 ಮಿ.ಮಿ. ಆಗಿದ್ದು ಪ್ರಸ್ತುತ ಅವಧಿಯಲ್ಲಿ 56 ಮಿ.ಮಿ. ಮಳೆಯಾಗಿದ್ದು ಶೇ. 13 ರಷ್ಟು ಕೊರತೆ ಕಂಡು ಬಂದಿರುತ್ತದೆ. ಈ ಅವಧಿಯಲ್ಲಿ 20 ಜಿಲ್ಲೆಗಳ 115 ತಾಲ್ಲೂಕುಗಳಲ್ಲಿ ಬರುವ 476 ಹೋಬಳಿಗಳಲ್ಲಿ ಮಾಮೂಲು ಅಥವಾ ಅಧಿಕ ಮಳೆಯಾಗಿರುತ್ತದೆ. ಉಳಿದ 271 ಹೋಬಳಿಗಳಲ್ಲಿ ಸಾಧಾರಣದಿಂದ ತೀವ್ರ ಮಳೆ ಕೊರತೆಯಿರುತ್ತದೆ.

ಪ್ರಸ್ತುತ ರಾಜ್ಯದ 124 ತಾಲ್ಲೂಕುಗಳಲ್ಲಿ ಮಳೆ ಕೊರತೆ, ಸತತ ನಾಲ್ಕು ವಾರ ಮತ್ತು ಅಧಿಕ ಶುಷ್ಕ ವಾತಾವರಣ ಹಾಗೂ ತೇವಾಂಶ ಕೊರತೆ ಉಂಟಾಗಿದೆ.

ಸರ್ಕಾರ ತೆಗೆದುಕೊಂಡ ಕ್ರಮಗಳು

ಸರ್ಕಾರವು ಕೆಳಕಂಡಂತೆ ಕ್ರಮಗಳನ್ನು ಜರುಗುಸಿದೆ.

ದಿನಾಂಕ 6.1.2012, 22.2.2012. 3.4.2012 ಮತ್ತು 13.7.2012 ರಂದು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಮುಖ್ಯ ಮಂತ್ರಿಗಳು ಹಾಗೂ ಇತರೆ ಸಚಿವರು ನೇರವಾಗಿ ವಿಡಿಯೋ ಸಂವಾದವನ್ನು ನಡೆಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಎಲ್ಲಾ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರತಿ ತಿಂಗಳು, ಬರ ಪರಿಸ್ಥಿತಿಯ ವಿಮರ್ಶಾ ಸಭೆಗಳನ್ನು ನಡೆಸಿ ಪರಹಾರ ಕಾರ್ಯಗಳನ್ನು ಯುದ್ಧೋಪಾದಿಯಲ್ಲಿ ಜಾರಿಗೊಳಿಸಲು ಸಹ ತಿಳಿಸಲಾಗಿದೆ.

ಸಕಾಲದಲ್ಲಿ ಮಳೆಯಾದರೆ, 2012ರ ಮುಂಗಾರು ಹಂಗಾಮಿನಲ್ಲಿ ಒಟ್ಟು 74.70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬಿತ್ತನೆ ಗುರಿ ಹೊಂದಿದ್ದು, 28.03 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಕೃಷಿ ಬಿತ್ತನೆಯಾಗಿದೆ. 2.48 ಲಕ್ಷ ಹಕ್ಟೇರ್ ಪ್ರದೇಶದಲ್ಲಿ ಬೆಳೆಗಳು. ಮಳೆಯ ಕೊರತೆಯಿಂದ ಒಣಗಿದ್ದು

ಅಂದಾಜು ಬೆಳೆಹಾನಿಯ ಮೊತ್ತ ರೂ. 297.60 ಕೋಟಿಗಳಾಗಿರುತ್ತದೆ. ಈ ಬೆಳೆನಷ್ಟವನ್ನು ಎನ್.ಡಿ.ಆರ್.ಎಫ್ ಮಾರ್ಗಸೂಚಿಗಳ ಪ್ರಕಾರ ಪರಿಹರಿಸಲು ರೂ. 74.40 ಕೋಟಿಗಳನ್ನು ಬಿಡುಗಡೆ ಮಾಡಲಾಗುವುದು.

ಮುಂಗಾರು ಹಂಗಾಮಿನಲ್ಲಿ 24.85 ಲಕ್ಷ ಟನ್ ವಿವಿಧ ರಸಗೊಬ್ಬರ ಬೇಡಿಕೆ ಇದ್ದು, 23.7.2012 ರವರೆಗೆ 7.70 ಲಕ್ಷ ಟನ್ ಸರಬರಾಜಾಗಿರುತ್ತದೆ. 6.73 ಲಕ್ಷ ದಾಸ್ತಾನು ಲಭ್ಯವಿದೆ. ಮುಂಗಾರು ಹಂಗಾಮಿನ ವಿವಿಧ ಬೆಳೆಗಳ ಬಿತ್ತನೆ ಬೀಜವಾದ ಬೇಡಿಕೆ 8.30 ಲಕ್ಷ ಕ್ವಿಂಟಾಲ್ ಗಳಷ್ಟಿದ್ದು ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ 9.50 ಲಕ್ಷ ಕ್ವಿಂಟಾಲ್ ಪ್ರಮಾಣಿತ ಹಾಗೂ ಗುಣಮಟ್ಟದ ಬೀಜಗಳು ಲಭ್ಯವಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿವಿಧ ಯೋಜನೆಗಳಡಿ ಶೇ. 50 ರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಪೂರೈಸಲಾಗುತ್ತಿದೆ. ದಿನಾಂಕ 23–7–2012 ರವರೆಗೆ 12.31 ಲಕ್ಷ ರೈತರಿಗೆ 3.13 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ. ಹಾಗೂ 2.03 ಲಕ್ಷ ಟನ್ ಬಿತ್ತನೆ ಬೀಜಗಳು ವಿವಿಧ ರೈತ ಸಂಪರ್ಕ ಕೇಂದ್ರ ಮಾರಾಟ ಕೇಂದ್ರಗಳಲ್ಲಿ ಲಭ್ಯವಿರುತ್ತದೆ. ರಸಗೊಬ್ಬರ ಮತ್ತು ಬಿತ್ತನೆ ಬೀಜದ ಕೊರತೆ ಇರುವುದಿಲ್ಲ.

ರಾಜ್ಯದ ಬರ ಪೀಡಿತ ಜಿಲ್ಲೆಗಳಲ್ಲಿ ಶಾಶ್ವತ ಪರಿಹಾರ ರೂಪಿಸಲು ICRISAT ಸಂಸ್ಥೆ ಹಾಗೂ 7 CGIAR ಸಂಸ್ಥೆಗಳ ಸಹಯೋಗದೊಂದಿಗೆ ಪ್ರತಿಯೊಂದು ರೆವೆನ್ಯೂ ವಿಭಾಗದಲ್ಲಿ ಒಂದು ಜಿಲ್ಲೆಯಂತೆ ಒಟ್ಟು ನಾಲ್ಕು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ GOK-CGIAR INITIATIVES FOR IMPROVING RURAL LIVELIHOODS in Karnataka ಯೋಜನೆಯನ್ನು ತಯಾರಿಸಲು MOU ಸಹಿ ಮಾಡಲಾಗಿದೆ. ಕ್ರಿಯಾ ಯೋಜನೆ ತಯಾರಿಕಾ ಹಂತದಲ್ಲಿದೆ.

ಕುಡಿಯುವ ನೀರಿನ ಬಗ್ಗೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ – ಗ್ರಾಮೀಣ ನೀರು ಪೂರೈಕೆ

* ಕೇಂದ್ರ ಮತ್ತು ರಾಜ್ಯ ವಲಯಗಳಡಿ 2011–12ರ ಸಾಲಿಗೆ NRDWP ಯಡಿ OB (ರೂ. 470 ಕೋಟಿ) ಸೇರಿ ಲಭ್ಯವಾಗಿದ್ದ ಅನುದಾನ :	ರೂ. 1500.00 ಕೋಟಿ
* ರಾಜ್ಯದ ಉತ್ತಮ O&M ವ್ಯವಸ್ಥೆ ಹಾಗೂ ಪ್ರತಿ ಆಧರಿಸಿ ಮಾರ್ಚ್ 2012ರಲ್ಲಿ ಕೇಂದ್ರದಿಂದ ಸ್ವೀಕೃತಿಯಾದ ಪ್ರೋತ್ಸಾಹ ಧನ ಮತ್ತು ತಡವಾಗಿ ಬಂದ 2ನೇ ಕಂತಿನ ಬಾಕಿ ಅನುದಾನ :	ರೂ. 156.75 ಕೋಟಿ
* ಹೀಗಾಗಿ 2011–12ನೇ ಸಾಲಿಗೆ ಕುಡಿಯುವ ನೀರಿನ ಬಾಬ್ತಿಗಾಗಿ ಲಭ್ಯವಾದ ಒಟ್ಟು ಅನುದಾನ :	ರೂ. 1656.75 ಕೋಟಿ
* ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗಾಗಿ ಆಗಿರುವ ವೆಚ್ಚ (Task Force Committee works) :	ರೂ. 175.00 ಕೋಟಿ
* ವಾರ್ಷಿಕ ಕ್ರಿಯಾ ಯೋಜನೆಯನ್ವಯ ಆಗಿರುವ ವೆಚ್ಚ :	ರೂ. 1006.53 ಕೋಟಿ
* ಹೀಗಾಗಿ 2011–12ರಲ್ಲಿ ಕುಡಿಯುವ ನೀರಿನ ಬಾಬ್ತಿಗಾಗಿ ಒಟ್ಟು ವೆಚ್ಚವಾದ ಅನುದಾನ :	ರೂ. 1181.53. ಕೋಟಿ

* ವರ್ಷಾಂತ್ಯದಲ್ಲಿ (ಮಾರ್ಚ್ 2012ರಲ್ಲಿ ರಾಜ್ಯ ಮತ್ತು ಕೇಂದ್ರ ವಲಯಗಳಡಿ ಬಿಡುಗಡೆಯಾದ ರೂ. 375 ಕೋಟಿ ಪ್ರಯುಕ್ತ) ಬಾಕಿಯುಳಿದಿದ್ದ ಅನುದಾನ :	ರೂ. 475.00 ಕೋಟಿ
* 2012-13ರ ಮೇ-ಜೂನ್ 2012ರಲ್ಲಿ ಕೇಂದ್ರ + ರಾಜ್ಯ ವಲಯದಡಿ ಲಭ್ಯವಿದ್ದ ಒಟ್ಟು OB ಸಂಪೂರ್ಣವಾಗಿ ವಿನಿಯೋಗವಾಗಿ ಕೇಂದ್ರಕ್ಕೆ ವರದಿ ಮಾಡಿರುವ ವೆಚ್ಚ :	ರೂ. 475.00 ಕೋಟಿ
* ಕೇಂದ್ರವು 2012-13ರ ಸಾಲಿಗೆ ರಾಜ್ಯಕ್ಕೆ ಕಳೆದ ಸಾಲಿಗಿಂತ ಹೆಚ್ಚಿನ ಅನುದಾನ ಹಂಚಿಕೆ (ರೂ. 881 ಕೋಟಿ) ಮಾಡಿದೆ. ಪ್ರಸಕ್ತ ಸಾಲಿಗೆ OB ಸೇರಿ ಲಭ್ಯವಾಗುವ ಒಟ್ಟು ಅನುದಾನ	ರೂ. 1846.00 ಕೋಟಿ.
* 2012-13ರಲ್ಲಿ ಎಲ್ಲಾ ಸಮಸ್ಯಾತ್ಮಕ ಗ್ರಾಮಗಳನ್ನೂ ಆವರಿಸಲು ರೂ. 2100 ಕೋಟಿ ಅಂದಾಜಿನ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದೆ. ಈ ಸಲುವಾಗಿ ರೂ. 900 ಕೋಟಿ ಅನುದಾನ ಈಗಾಗಲೇ (ರಾಜ್ಯ + ಕೇಂದ್ರ ಸೇರಿ) ಬಿಡುಗಡೆಯಾಗಿದೆ. ವೆಚ್ಚ ರೂ. 475 ಕೋಟಿಯಾಗಿದೆ.	
* 2012-13ರ ಸಾಲಿಗೆ ತುರ್ತು ಕುಡಿಯುವ ನೀರಿನ ಯೋಜನೆಗಳಿಗಾಗಿ ಬಿಡುಗಡೆಯಾದ ಅನುದಾನ (ಅನುಮೋದಿತ ಕ್ರಿಯಾ ಯೋಜನೆಯನ್ವಯ ಕಾಮಗಾರಿಗಳು ಅನುಷ್ಠಾನವಾಗುತ್ತಿದೆ) :	ರೂ. 59.38 ಕೋಟಿ

ಕುಡಿಯುವ ನೀರಿನ ಬಗ್ಗೆ

2011 ಮತ್ತು 2012–13ನೆ ಸಾಲಿನಲ್ಲಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಿಗೆ ಸಮರ್ಪಕ ನೀರು ಸರಬರಾಜಿಗಾಗಿ ಪಂಪು ಮೋಟಾರು ಮತ್ತು ಪೈಪ್ ಲೈನುಗಳ ದುರಸ್ಥಿ ಕಾರ್ಯಗಳು ನೀರು ಸಾಗಾಣಿಕೆ ಮಾಡಲು ಎಸ್.ಡಿ.ಆರ್.ಎಫ್. ನಿಧಿಯಿಂದ ರೂ. 459.75 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

2012–13ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಎಸ್ಎಫ್‌ಸಿ ಅನುದಾನದಿಂದ ರೂ. 24.00 ಕೋಟಿಗಳನ್ನು ಮತ್ತು ಎನ್.ಡಿ.ಆರ್.ಎಫ್. ನಿಧಿಯಿಂದ ರೂ. 40.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

- 2011–12 ರಲ್ಲಿ OB ರೂ. 470.55 ಕೋಟಿ ಸೇರಿ ರಾಜ್ಯ ಮತ್ತು ಕೇಂದ್ರ ವಲಯಗಳಡಿ (2011–12ರ ಸಾಲಿನಲ್ಲಿ ರಾಜ್ಯದಲ್ಲಿನ O&M ವ್ಯವಸ್ಥೆ ಮತ್ತು ರಾಜ್ಯದ ಉತ್ತಮ ಪ್ರಗತಿ ನೋಡಿ ಕೇಂದ್ರ ನೀಡಿದ ಹೆಚ್ಚುವರಿ / ಪ್ರೋತ್ಸಾಹ ಧನ ರೂ. 96.17 ಕೋಟಿ) ಕುಡಿಯುವ ನೀರಿನ ಬಾಬ್ತಿಗಾಗಿ ಲಭ್ಯವಾದ ಒಟ್ಟು ಅನುದಾನ : ರೂ. 1656.75 ಕೋಟಿ.
- 2011–12ರಲ್ಲಿ (ಮಾರ್ಚ್ 2012 ರಲ್ಲಿ ರಾಜ್ಯ+ ಕೇಂದ್ರದ ಒಟ್ಟು ರೂ. 375 ಕೋಟಿ ಅನುದಾನ ಬಿಡುಗಡೆಯಾದ ಕಾರಣ) ಈ ಪೈಕಿ, ಆಗಿರುವ ವೆಚ್ಚ ರೂ. 1182.00 ಕೋಟಿ
- ಇದರಿಂದ 1970-PWS, Piped Water Scheme 1970-MWS, Mini Water Scheme 900-HP Borewells ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. 7262 ಸಮಸ್ಯಾತ್ಮಕ ಗ್ರಾಮಗಳನ್ನು ಆವರಿಸಲಾಗಿದೆ. 1495 ನೀರಿನ ಗುಣಮಟ್ಟದ (ಅಧಿಕ ಫ್ಲೋರೈಡ್ ಇತ್ಯಾದಿ) ಬಾಧೆಗಳೊಳಗಾದ ಜನವಸತಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿದೆ. ಅಂದರೆ ಒಟ್ಟು 8757 – ಸಮಸ್ಯಾತ್ಮಕ ಜನವಸತಿಗಳಿಗೆ ಸಮರ್ಪಕ ಕುಡಿಯುವ

ನೀರಿನ ವ್ಯವಸ್ಥೆ ಮಾಡಿದೆ. ಅಂದರೆ ಒಟ್ಟು 8757 ಸಮಸ್ಯಾತ್ಮಕ ಜನವಸತಿಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಮಾಡಿದೆ. 5338 – ಗ್ರಾಮೀಣ ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದೆ. 4093 – ಅಂತರ್ಜಲ ಮರುಪ್ರವಹಿಸುವ ಕಾಮಗಾರಿಗಳನ್ನು ಅನುಷ್ಟಾನಗೊಳಿಸಲಾಗಿದೆ.

- ತುರ್ತು ಕುಡಿಯುವ ನೀರಿನ ಸಂದರ್ಭ, ಟಾಸ್ಕ್ ಫೋರ್ಸ್ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನ ರೂ. 174.826 ಕೋಟಿ ಇದರಿಂದ, 6988 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. (ಈ ಪೈಕಿ 5783 ಸಫಲವಾಗಿದೆ, 1205 ಕೊಳವೆ ಬಾವಿಗಳು ವಿಫಲವಾಗಿದೆ) 1461 ಪುನಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 1103 ಪೈಪ್‌ಲೈನ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

2012–13:

- ಪ್ರಸಕ್ತ ಸಾಲಿಗೆ OB ರೂ. 475.00 ಕೋಟಿ ಸೇರಿ ರೂ. 1846 ಕೋಟಿ ಅನುದಾನ ರಾಜ್ಯ ಮತ್ತು ಕೇಂದ್ರ ವಲಯಗಳಡಿ ಕುಡಿಯುವ ನೀರಿನ ವಿವಿಧ ಘಟಕಗಳಡಿ ಲಭ್ಯವಿದ್ದು ರೂ. 2700 ಕೋಟಿ ಮೊತ್ತದ ಕ್ರಿಯಾ ಯೋಜನೆಯನ್ನು ರೂಪಿಸಿ (6027 ಸಮಸ್ಯಾತ್ಮಕ ಗ್ರಾಮಗಳು ಮತ್ತು 2318 ನೀರಿನ ಗುಣಮಟ್ಟದ ಸಮಸ್ಯೆಯಿರುವ ಗ್ರಾಮಗಳು ಹಾಗೂ 5261 ಗ್ರಾಮೀಣ ಶಾಲೆಗಳನ್ನು ಆವರಿಸುವುದು ಮತ್ತು 3479 ಅಂತರ್ಜಲ ಮರು ಪೂರಣ ಕಾಮಗಾರಿಗಳು) ಅನುಮೋದನೆ ನೀಡಲಾಗಿದೆ.
- ಈಗಾಗಲೇ ರೂ. 475 ಕೋಟಿ ವೆಚ್ಚವಾಗಿದ್ದು, 900 ಕ್ಕೂ ಹೆಚ್ಚಿನ ಜನವಸತಿಗಳನ್ನು ಆವರಿಸಲಾಗಿದೆ.
- ಪ್ರಸ್ತುತ 10 ಜಿಲ್ಲೆಗಳ 732 ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರನ್ನು 1056 ಟ್ಯಾಂಕರ್‌ಗಳ ಸಾಗಾಣಿಕೆ ಮುಖೇನ ಪೂರೈಸಲಾಗುತ್ತಿದ್ದು. ಸದರಿ ಸಮಸ್ಯಾತ್ಮಕ ಗ್ರಾಮಗಳಿಗೂ ಸಹ 2012–13ರ ಸಾಲಿನ ಕ್ರಿಯಾ ಯೋಜನೆಯಡಿ ರೂ. 57.84

ಕೋಟಿ ಅಂದಾಜು ವೆಚ್ಚದಲ್ಲಿ ಅಗತ್ಯವಿರುವ 1438 ಪುನಶ್ಚೇತನ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ.

- ಜೊತೆಗೆ 2012–13ರ ಸಾಲಿನಲ್ಲಿ ಈಗಾಗಲೇ ರೂ. 59.38 ಕೋಟಿ ಅನುದಾನವನ್ನು ಬರದ ಸಲುವಾಗಿ ತುರ್ತು ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ ಸಲುವಾಗಿ ಹೆಚ್ಚುವರಿಯಾಗಿ ಬಿಡುಗಡೆ ಮಾಡಿದೆ. ತುರ್ತು ಕಾಮಗಾರಿಗಳು ಟಾಸ್ಕ್ ಫೋರ್ಸ್ ಸಮಿತಿಗಳಿಂದ ಅನುಮೋದನೆಯಾದಂತೆ ಅನುಷ್ಠಾನವಾಗುತ್ತಿದೆ.
- ರಾಜ್ಯ ಆಯವ್ಯಯದಿಂದ ವಿದ್ಯುದ್ಧೀಕರಣ ಸಲುವಾಗಿ ಬರ–ಪೀಡಿತ ಜಿಲ್ಲೆಗಳಿಗೆ ತಲಾ ರೂ. 1.50 ಕೋಟಿಯಂತೆ ವಿನಿಯೋಗಿಸಲು ಆದೇಶಿಸಿದೆ.
- ರಾಜ್ಯಾದ್ಯಾಂತ ಜನವರಿ 2012ರಿಂದ ಜುಲೈ 2012ವರೆಗೆ 5589 ದೂರುಗಳು ತಾಲ್ಲೂಕು ಮಟ್ಟದ 'ಕಂಟ್ರೋಲ್ ರೂಂ' ಗಳಲ್ಲಿ ಸ್ವೀಕೃತಿಯಾಗಿದ್ದು, ಇವುಗಳ ಪೈಕಿ 4803 ದೂರುಗಳಿಗೆ ಸ್ಥಳೀಯ ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗಗಳು ಸ್ಪಂದಿಸಿದೆ. ಉಳಿದುವುಗಳಿಗೆ ಸೂಕ್ತ ಜಲಮೂಲದ ಅನ್ವೇಷಣೆ ನಡೆದಿದೆ.
- ಯೋಜನೆಗಳ ನಿರಂತರತೆ ಮತ್ತು ಆರ್ಥಿಕ ಹಾಗೂ ತಾಂತ್ರಿಕ ಕಾರ್ಯಸಿಂಧುತ್ವಕ್ಕೆ ನೋಡಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಗಾಗಿ ಭೂಮಿಯ ಮೇಲೆ ಜಲಮೂಲಗಳನ್ನು ಆಧರಿಸಿ ಬಹುಗ್ರಾಮ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಆದ್ಯತೆ ನೀಡುತ್ತಿದೆ. ಈ ಸಂಬಂಧ 519–ಬಹುಗ್ರಾಮ ಯೋಜನೆಗಳನ್ನು ರೂ. 4608 ಕೋಟಿ ಅಂದಾಜು ಮೊತ್ತದಲ್ಲಿ ಮಂಜೂರು ಮಾಡಲಾಗಿದ್ದು 121–ಯೋಜನೆಗಳು ಪೂರ್ಣಗೊಂಡಿದೆ. 185–ಪ್ರಗತಿಯಲ್ಲಿವೆ ಹಾಗೂ ಉಳಿದ 213 – ಯೋಜನೆಗಳ DPR ತಯಾರಿಕೆ ಮತ್ತು ಟೆಂಡರ್ ಪ್ರಕ್ರಿಯೆ ನಡೆದಿದೆ. ಪ್ರಸ್ತುತ ಅಂದಾಜಿನ ಪ್ರಕಾರ ಈಗಾಗಲೇ ರೂಪಿಸಿರುವ ಬಹುಗ್ರಾಮ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಪೂರ್ಣಗೊಳಿಸಲು ಮತ್ತು ಸಮಸ್ಯಾತ್ಮಕ ಗ್ರಾಮಗಳಲ್ಲಿನ

ಯೋಜನೆಗಳನ್ನು ಪುನಃಶ್ಚೇತನಗೊಳಿಸಲು ಸುಮಾರು ರೂ. 6450 ಕೋಟಿ ಅನುದಾನದ ಅವಶ್ಯಕತೆಯಿಂದ 2015AD ಮಿಲಿನಿಯಮ್ ಡೆವೆಲಪ್‌ಮೆಂಟ್ ಗೋಲ್ ಅವಧಿಯೊಳಗೆ ಉದ್ದೇಶಿತ ಸಾಧನೆ ಮಾಡಲು ಸರ್ಕಾರವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ.

ಉದ್ಯೋಗ ಸೃಜನೆ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ

(NREGA):
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರ

ಅ. 2011–12ನೇ ಸಾಲಿನ ವಿವರಗಳು:

1. 2011–12ನೇ ಸಾಲಿಗೆ ಒಟ್ಟು ಜಿಲ್ಲಾವರು ಹಂಚಿಕೆ – ರೂ. 1928.55 ಕೋಟಿಗಳು
2. 2011–12ನೇ ಸಾಲಿಗೆ ಒಟ್ಟು ಸಾಧನೆ (ವೆಚ್ಚ) – ರೂ. 2197.11 ಕೋಟಿಗಳು (ಶೇಕಡ 114)

ಜಿಲ್ಲಾವಾರು ಹಂಚಿಕೆ ಮತ್ತು ಸಾಧನೆ ವಿವರಗಳು

ಕ್ರಸಂ.	ಜಿಲ್ಲೆಯ ಹೆಸರು	ಹಂಚಿಕೆ	ಸಾಧನೆ/ವೆಚ್ಚ
ಬರಪೀಡಿತ ಜಿಲ್ಲೆಗಳಲ್ಲಿ			
1	ಬೀದರ್	6143.12	6891.49
2	ಚಿತ್ರದುರ್ಗ	12843.15	18457.77
3	ದಾವಣಗೆರೆ	11835.6	18680.17
4	ಗುಲ್ಬರ್ಗ	9787.75	11236.35
5	ರಾಯಚೂರು	11004.02	14173.96
6	ಬೆಳಗಾಂ	20888.02	22476.5
7	ಬಳ್ಳಾರಿ	3927.06	3962.73

8	ಚಿಕ್ಕಮಗಳೂರು	5571.87	5646.04
9	ಹಾಸನ	5886.8	9299.84
10	ಬಾಗಲಕೋಟೆ	6228.63	7881.12
11	ಬೆಂಗಳೂರು (ಗ್ರಾ)	2378.94	2053.75
12	ಬಿಜಾಪುರ	8682.89	13448.12
13	ಚಾಮರಾಜನಗರ	4279.96	4492.50
14	ಚಿಕ್ಕಬಳ್ಳಾಪುರ	3313.82	2978.47
15	ಧಾರವಾಡ	5204.08	5863.51
16	ಗದಗ	4192.07	3766.01
17	ಹಾವೇರಿ	6294.66	8482.78
18	ಕೋಲಾರ	5889.96	6997.72
19	ಕೊಪ್ಪಳ	8080.41	8526.54
20	ಮಂಡ್ಯ	5748	5338.89
21	ಮೈಸೂರು	5295.42	3920.75
22	ರಾಮನಗರ	4984.91	6880.1
23	ತುಮಕೂರು	11863.96	5571.18
24	ಯಾದಗಿರಿ	5857.01	7654.54
ಒಟ್ಟು		**176181.84**	**204680.83**
ಇತರೆ ಜಿಲ್ಲೆಗಳು			
25	ಕೊಡಗು	2279.21	2482.76
26	ಶಿವಮೊಗ್ಗ	5273.27	5571.33
27	ಬೆಂಗಳೂರು ನಗರ	808.76	207.13
28	ದಕ್ಷಿಣ ಕನ್ನಡ	2337.41	2001.61
29	ಉಡುಪಿ	1789.8	260.47
30	ಉತ್ತರ ಕನ್ನಡ	4184.46	260.47
ಒಟ್ಟು		**16673.61**	**15031.07**
ಎಲ್ಲಾ ಸೇರಿ ಒಟ್ಟು		**192855.45**	**219711.90**

ಪ್ರಾರಂಭದಿಂದ ಯೋಜನೆಯ ಸಾಧನೆಗಳು

ಆರ್ಥಿಕ ವರ್ಷ	ಉದ್ಯೋಗ ಚೀಟಿ ವಿತರಣೆ (ಲಕ್ಷಗಳಲ್ಲಿ)	ಉದ್ಯೋಗ ಒದಗಿಸಲಾದ ಕುಟುಂಬಗಳು (ಲಕ್ಷಗಳಲ್ಲಿ)	ಉತ್ಪತ್ತಿಯಾದ ಮಾನವ ದಿನಗಳು (ಲಕ್ಷಗಳಲ್ಲಿ)	ಸರಾಸರಿ ಮಾನವದಿನಗಳು ಪ್ರತಿ ಕುಟುಂಬಕ್ಕೆ	ವೆಚ್ಚ (ಲಕ್ಷಗಳಲ್ಲಿ)
2006–07	7.96	5.45	222.01	40.72	24829.67
2007–08	15.23	5.49	197.79	35.96	23650.54
2008–09	34.20	8.96	287.64	32.10	35787.47
2009–10	62.44	35.35	2001.61	56.62	221693.18
2010–11	52.98	22.24	1097.83	49.38	186047.28
2011–12 (MPR provisional)	55.71	16.52	699.55	42.34	219711.90

ಇ. 2012–13ನೇ ಸಾಲಿನ ವಿವರಗಳು

ಕ್ರಸಂ.	ಅನುದಾನದ ವಿವರಗಳು	ರೂ. ಕೋಟಿಗಳಲ್ಲಿ
1	2012–13ಕ್ಕೆ ಅನುಮೋದಿತ ಆಯವ್ಯಯ	2442.97
2	ಆರಂಭಿಕ ಶಿಲ್ಕು 01.04.2012 ರಂತೆ	0.83
3	ಭಾರತ ಸರ್ಕಾರದಿಂದ ಪಡೆದ ಅನುದಾನ	700.00
4	ಕರ್ನಾಟಕ ಸರ್ಕಾರದಿಂದ ಪಡೆದ ಅನುದಾನ	37.82
5	ಇತರೆ	5.19
6	ಒಟ್ಟು	743.84
7	ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನ	643.72
8	ಒಟ್ಟು ಖರ್ಚು ವಿವರ (ಈ ದಿನದ ವರೆಗೆ)	319.03
9	ಉದ್ಯೋಗ ಚೀಟಿ ವಿತರಣೆ	52.03
10	ಉದ್ಯೋಗ ಒದಗಿಸಲಾದ ಕುಟುಂಬಗಳು	1.11
11	ಉತ್ಪತ್ತಿಯಾದ ಮಾನವ ದಿನಗಳು	18.18
12	ನೂರು ದಿನಗಳನ್ನು ಪೂರೈಸಿರುವ ಕುಟುಂಬಗಳ ಸಂಖ್ಯೆ	316
13	**ಒಟ್ಟು ಕಾಮಗಾರಿಗಳ ಸಂಖ್ಯೆ**	**249457**
14	**ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ**	**10979**

ಈ ಯೋಜನೆಯ ಅನುಷ್ಠಾನದಲ್ಲಿರುವ ತೊಂದರೆಗಳು:

ಮಾಹಿತಿ ಕೊರತೆ, ಅನುಷ್ಠಾನ ಸಿಬ್ಬಂದಿಗಳು, ತಾಂತ್ರಿಕ ಸಿಬ್ಬಂದಿಗಳ ಕೊರತೆಯಿಂದಾಗಿ ಈ ಯೋಜನೆ ಅನುಷ್ಠಾನದಲ್ಲಿ ಕೆಲ ತೊಂದರೆಗಳು ಕಂಡುಬಂದಿದೆ.

ಕ್ರಿಯಾ ಯೋಜನೆ:

ಪ್ರಸ್ತುತ ಸಾಲಿನಲ್ಲಿ ಒಟ್ಟು 246738 ಕಾಮಗಾರಿಗಳನ್ನು ಕೈಗೊಂಡಿದ್ದು 11693 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ ಇದರ ಪೈಕಿ 235045 ಕಾಮಗಾರಿಗಳು ಮುಂದುವರೆದ ಕಾಮಗಾರಿಗಳಾಗಿರುತ್ತವೆ. ಸದರಿ ಕಾಮಗಾರಿಗಳನ್ನು 2012–13ನೇ ಸಾಲಿನಲ್ಲಿ ಮುಂದುವರೆಸಲು ಯಾವ ಅನುಮೋದನೆಯ ಅವಶ್ಯಕತೆ ಇರುವುದಿಲ್ಲ. ಆದರೂ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕ್ರಿಯಾಯೋಜನೆಗೆ (ಕಾಮಗಾರಿಗಳ ಗುಚ್ಛಗಳಿಗೆ) ಆನುಮೋದನೆ ನೀಡಿದ್ದು ಅದರಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನಿಗಧಿತ ಅವಧಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆನುಮೋದನೆ ನೀಡದಿದ್ದರೂ ಸಹ ಮಾರ್ಗಸೂಚಿಯ ಕಂಡಿಕೆ : 4.4.11 ರಂತೆ ಕಾಮಗಾರಿಗಳ ಗುಚ್ಛಗಳು ಆನುಮೋದನೆಯಾಗಿದೆ ಎಂದು ಭಾವಿಸಬೇಕಾಗಿದೆ. ಮುಂದುವರೆದ ಕಾಮಗಾರಿಗಳ ಹೊಸ ಹೊಸ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

ಊ. ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮಗಳ ವಿವರಗಳು :

- ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳು ಪ್ರಮುಖ ಅನುಷ್ಠಾನ ಸಂಸ್ಥೆಗಳಾಗಿದ್ದು ಅದರ ಜೊತೆಗೆ ಅರಣ್ಯ, ತೋಟಗಾರಿಕೆ, ಸಣ್ಣ ನೀರಾವರಿ ಮತ್ತು ಜಲಾನಯನ ಇಲಾಖೆಗಳು ಅನುಷ್ಠಾನ ಸಂಸ್ಥೆಗಳಾಗಿವೆ. ಯಾವುದೇ ಖಾಸಗಿ / ಸಂಸ್ಥೆಗಳು ಅನುಷ್ಟಾನ ಸಂಸ್ಥೆಗಳನ್ನಾಗಿ ನೇಮಕ ಮಾಡಲಾಗಿಲ್ಲ.

- ಗ್ರಾಮ ಪಂಚಾಯಿತಿಗಳು ಈ ಯೋಜನೆಯ ಅನುಷ್ಠಾನದಲ್ಲಿ ಬಹಳಷ್ಟು ಪ್ರಮುಖ ಪಾತ್ರವಹಿಸುತ್ತಿದ್ದು ಕಾರ್ಯಕ್ರಮ ಆನುಷ್ಠಾನಾಧಿಕಾರಿ (ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ) ಮತ್ತು ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು) ಈ ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿಯನ್ನು ನೀಡಲಾಗಿದೆ.
- ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡುವ ಅಧಿಕಾರಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ವಿಕೇಂದ್ರಿಕರಣಗೊಳಿಸಿದೆ.
- ಅನುಷ್ಠಾನ, ವಿಷಯದಲ್ಲಿ ರಾಜ್ಯದಿಂದ ಯಾವುದೇ ರೀತಿಯ ಅನುಮತಿ ಜಿಲ್ಲೆಗಳಿಗೆ ಮತ್ತು ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯಿತಿಗಳಿಗೆ ಬೇಕಾಗಿರುವುದಿಲ್ಲ.
- ಜನ ಜಾಗೃತಿ ಕುರಿತಂತೆ, ಆಕಾಶವಾಣಿ ಮತ್ತು ದೂರದರ್ಶನಗಳ ಮೂಲಕ ಪ್ರಚಾರಗೊಳಿಸಲಾಗುತ್ತಿದೆ. ವಿವಿಧ ಪಾಲುದಾರರಿಗೆ (Stake Holders) ತರಬೇತಿಯನ್ನು (ANSSIRD) ಮೈಸೂರು ಇವರ ಮೂಲಕ ನೀಡಲಾಗುತ್ತಿದೆ.
- ಉಪಗ್ರಹ ಆಧಾರಿತ ತರಬೇತಿಯನ್ನು ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಮೇಲಿಂದ ಮೇಲೆ ನೀಡಲಾಗುತ್ತಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕುರಿತು ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ ವಿಶೇಷ ಸಂಚಿಕೆಯನ್ನಾಗಿ ಹೊರಡಿಸಲಾಗಿದೆ.
- ರಾಜ್ಯದ 7 ಜಿಲ್ಲೆಗಳಲ್ಲಿ ಇಎಫ್‌ಎಂಎಸ್ ತಂತ್ರಾಂಶದ ಮೂಲಕ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲು ಕ್ರಮವಹಿಸಲಾಗಿದೆ.

- ಕಾಯಕ ಬಂಧು (ಮೇಟ್) ಪದ್ಧತಿಯನ್ನು ಜಾರಿಗೆ ತರಲಾಗಿದೆ. ಇವರ ಕೂಲಿ ಪಾವತಿಸಲು ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ.
- ಜಿಲ್ಲಾ ಮಟ್ಟದಲ್ಲಿ ಲೋಕಸಭೆ ಸದಸ್ಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಉಸ್ತುವಾರಿ ಸಮಿತಿ ರಚಿತವಾಗಿದ್ದು ಕಾಲಕಾಲಕ್ಕೆ ಯೋಜನೆಯ ಬಗ್ಗೆ ಪರಿಶೀಲನೆ ನಡೆಸುತ್ತಿದೆ. ಹಾಗೂ ಅಗತ್ಯ ಸೂಚನೆಗಳನ್ನು ಸಲಹೆಗಳನ್ನು ನೀಡಲಾಗುತ್ತಿದೆ.
- ರಾಜ್ಯ ಮಟ್ಟದಲ್ಲಿ ಜಾಗೃತಿ ಉಸ್ತುವಾರಿ ಸಮಿತಿ ಈ ಯೋಜನೆಯ ಬಗ್ಗೆ ಚರ್ಚಿಸಿ ಸಲಹೆ ಸೂಚನೆಗಳನ್ನು ಮತ್ತು ಕೇಂದ್ರ ಸರ್ಕಾರಕ್ಕೆ ಹೊಸದಾಗಿ ತೆಗೆದುಕೊಳ್ಳಬಹುದಾದ ಯೋಜನೆಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ನೀಡುತ್ತದೆ. ಉದಾಹರಣೆಗೆ ಶೌಚಾಲಯಗಳ ನಿರ್ಮಾಣ 200 ದಿನಗಳ ವರೆಗೆ ಕೆಲಸಕ್ಕೆ ಅವಕಾಶ. ಹೆಚ್ಚುವರಿ ಸಿಬ್ಬಂದಿಗಳ ನೇಮಕ ಇತ್ಯಾದಿ.

ಕೆಲವು ಜಿಲ್ಲೆಗಳಲ್ಲಿ ಪ್ರಗತಿ ಕುಂಠಿತವಾಗಿರುವುದು ನಿಜ. ಈ ಸಾಲಿನಲ್ಲಿ ಶೇಕಡಾ 100% ಸಾಧನೆ ಮಾಡಲು ಸಂಬಂಧಿತ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು. ಸದ್ಯದಲ್ಲಿ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳನ್ನೊಳಗೊಂಡ ರಾಜ್ಯ ಉದ್ಯೋಗ ಪರಿಷತ್ತಿನ ಸಭೆಯನ್ನು ಕರೆದು ಹೆಚ್ಚಿನ ರೀತಿ ಪ್ರಗತಿ ಸಾಧಿಸಲು ಯೋಜನೆ ಹಮ್ಮಿಕೊಳ್ಳಲಾಗುವುದು.

ಸರ್ಕಾರ ಈ ಯೋಜನೆಯನ್ನು ಸಂಪೂರ್ಣವಾಗಿ ಗ್ರಾಮೀಣ ಪ್ರದೇಶ ಅಭಿವೃದ್ಧಿಗಾಗಿ ಬಳಸಿ ಗ್ರಾಮೀಣ ಪ್ರದೇಶದ ಜೀವನೋಪಾಯದ ಸ್ವತ್ತುಗಳನ್ನು ಸೃಜೀಸುವಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಮಾನ್ಯ ವಿಧಾನ ಸಭಾ ಸದಸ್ಯರು ತಮ್ಮ ತಮ್ಮ ಗ್ರಾಮ ಪಂಚಾಯಿತಿಗಳೊಂದಿಗೆ ವಿಸ್ತೃತವಾಗಿ ಚರ್ಚಿಸಿ ಗ್ರಾಮ ಪಂಚಾಯಿತಿಗಳಿಗೆ ಮಾರ್ಗದರ್ಶನ ನೀಡುವಂತೆ ಕೋರಿದೆ.

ಜಾನುವಾರು ಸಂರಕ್ಷಣೆ:

ರಾಜ್ಯದಲ್ಲಿ ಒಟ್ಟು 1,39,52,974 ಮೇವು ಅವಲಂಭಿತ ಜಾನುವಾರಗಳಿದ್ದು 55,93,131 ಟನ್ ಮೇವು ಲಭ್ಯವಿದೆ. ಲಭ್ಯವಿರುವ ಮೇವು ಮುಂದಿನ 11 ವಾರಗಳಿಗೆ ಸಾಕಾಗುತ್ತದೆ. ಚಿಕ್ಕಬಳ್ಳಾಪುರ, ಚಿತ್ರದುರ್ಗ, ಶಿವಮೊಗ್ಗ, ಚಾಮರಾಜನಗರ, ಬೆಳಗಾವಿ, ಗುಲ್ಬರ್ಗ, ಕೊಪ್ಪಳ ಮತ್ತು ಬೀದರ್ ಜಿಲ್ಲೆಗಳಲ್ಲಿ ಲಭ್ಯವಿರುವ ಮೇವು ಮುಂದಿನ 5–6 ವಾರಗಳಿಗೆ ಮಾತ್ರ ಸಾಕಾಗುತ್ತದೆ. ಲಭ್ಯವಿರುವ ಮೇವಿನ ದಾಸ್ತಾನು ಕಡಿಮೆ ಇರುವುದರಿಂದ ಪಂಜಾಬ್, ಹರಿಯಾಣ, ರಾಜ್ಯಗಳಿಂದ 10 ರೇಕ್ ಮೇವನ್ನು ತರಿಸಲಾಗುವುದು.

ದಿನಾಂಕ : 25.7.2011 ರಲ್ಲಿ 99.12 ಲಕ್ಷ ಮೆಟ್ರಿಕ್ ಮೇವಿನ ದಾಸ್ತಾನು ಇದ್ದು, ದಿನಾಂಕ 20.7.2012ರಂದು 55.51 ಲಕ್ಷ ಮೆ.ಟನ್ ಮೇವು ಲಭ್ಯವಿರುತ್ತದೆ. ಇದುವರೆಗೆ, ಗೋಶಾಲೆಗಳ ಮೂಲಕ 39015 ಮೆ.ಟನ್ ಮೇವನ್ನು ವಿತರಿಸಲಾಗಿದೆ. 69 ಮೇವು ಬ್ಯಾಂಕ್‌ಗಳಲ್ಲಿ 1113 ಮೆ.ಟನ್ ಮೇವು ಲಭ್ಯವಿದೆ. 24 ಜಿಲ್ಲೆಗಳಲ್ಲಿ ಅವಶ್ಯವಿದ್ದೆಡೆ 112 ಗೋಶಾಲೆಗಳನ್ನು ಸ್ಥಾಪಿಸಲಾಗಿದೆ ಇದರಲ್ಲಿ 1,06,000 ಜಾನುವಾರುಗಳನ್ನು ಸಂರಕ್ಷಿಸಲಾಗಿದೆ ಹಾಗೂ 69 ಮೇವಿನ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದೆ. 90 ಹೆಚ್ಚುವರಿ ಗೋಶಾಲೆಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿದೆ. 90 ದಿನಗಳಿಗೆ ತಲಾ ಗೋಶಾಲೆಗೆ 500 ಜಾನುವಾರುಗಳಂತೆ ರೂ. 48.00 ಕೋಟಿ ರೂ. ವೆಚ್ಚ ಆಗಲಿದೆ. ಹೆಚ್ಚುವರಿಯಾಗಿ ರೂ. 15.00 ಕೋಟಿಯಂತೆ ವೆಚ್ಚ ಮಾಡಲು ತೀರ್ಮಾನಿಸಲಾಗಿದೆ. ದಿನವೊಂದಕ್ಕೆ 5 ಕೆಜಿ ಮೇವನ್ನು ಪೂರೈಸುತ್ತಿದ್ದು ಇದರ ಪ್ರಮಾಣವನ್ನು 8 ಕೆಜಿಗೆ ಏರಿಸಲು ಕ್ರಮ ವಹಿಸಲಾಗಿದೆ. ಗೋಶಾಲೆಯಲ್ಲಿನ ಜಾನುವಾರುಗಳಿಗೆ ದಿನವೊಂದಕ್ಕೆ 30 ಗ್ರಾಂ.ನಂತೆ ಖನಿಜ ಮಿಶ್ರಣವನ್ನು ನೀಡಲು ಕ್ರಮ ವಹಿಸಲಾಗುತ್ತಿದೆ. ಈ ಮಿಶ್ರಣವನ್ನು ಕೆ.ಎಂ.ಎಫ್. ನಿಂದ ಖರೀದಿಸಲು ಉದ್ದೇಶಿಸಿದೆ.

ಪಶುಸಂಗೋಪನೆ ಇಲಾಖೆಯಿಂದ 2011–12ನೇ ಸಾಲಿನಲ್ಲಿ ವಿಶೇಷ ಅನುದಾನದಡಿಯಲ್ಲಿ ಮೇವಿನ ಬೀಜದ ಪೊಟ್ಟಣಗಳನ್ನು ರೂ. 4.98 ಕೋಟಿ ವೆಚ್ಚದಲ್ಲಿ ರೈತರಿಗೆ ಈಗಾಗಲೇ ಪೂರೈಸಲಾಗಿದೆ. ಪ್ರಸಕ್ತ

ಸಾಲಿನಲ್ಲಿ ಪಶು ಸಂಗೋಪನೆ ಇಲಾಖೆಯಿಂದ 500 ಎಕರೆ ಪ್ರದೇಶದಲ್ಲಿ ಮೇವು ಬೆಳೆಯಲು ಉದ್ದೇಶಿಸಲಾಗಿದೆ. ಆರ್.ಕೆ.ವಿ.ವೈ. ಯೋಜನೆಯಡಿಯಲ್ಲಿ ಮೇವು ಉತ್ಪಾದನೆಯನ್ನು ಉತ್ತೇಜಿಸಲು ರೂ.15.00 ಕೋಟಿ ವೆಚ್ಚದಲ್ಲಿ 15 ಲಕ್ಷ ಮೇವಿನ ಬೀಜಗಳ ಕಿರು ಪೊಟ್ಟಣ ಚೀಲಗಳನ್ನು ರೈತರಿಗೆ ವಿತರಿಸಲು ಕ್ರಮ ವಹಿಸಲಾಗುತ್ತಿದೆ.

ಕಂದಾಯ ಇಲಾಖೆಯ ಎಸ್.ಡಿ.ಆರ್.ಎಫ್ ನಿಧಿಯಡಿ ಜಾನುವಾರುಗಳಿಗೆ ರೋಗ ನಿರೋಧಕ ಲಸಿಕೆ, ಗೋಶಾಲೆಗಳ ಸ್ಥಾಪನೆ / ನಿರ್ವಹಣೆ, ಮೇವು ಖರೀದಿಗೆ ರೂ. 10.61 ಕೋಟಿ ವೆಚ್ಚ ಮಾಡಲಾಗಿದೆ.

ಮೇವು ಖರೀದಿ ಮತ್ತು ಮೇವು ಸರಬರಾಜುಗೆ ಸಂಬಂಧಪಟ್ಟಂತೆ ದರ ಪಟ್ಟಿಯನ್ನು ಕಳೆದ ಆರು ವರ್ಷಗಳಿಂದ ಪರಿಷ್ಕೃತವಾಗದಿದ್ದು ಈಗ್ಗೆ ಅವಶ್ಯಕತೆ ಮನಗೊಂಡು ಸರ್ಕಾರವು ದರ ಪಟ್ಟಿಯನ್ನು ಪರಿಷ್ಕರಣೆ ಮಾಡಿದೆ. ಪುನಃ ದರವನ್ನು ಗರಿಷ್ಠ ರೂ. 6000 ರವರೆಗೆ ಪರಿಷ್ಕರಿಸಲು ಕ್ರಮ ವಹಿಸಲಾಗಿದೆ ಸಾಗಾಣಿಕೆ ದರವನ್ನು ರೂ. 1.25 ರಿಂದ ರೂ। 1.50 ಕ್ಕೆ ಪ್ರತಿ ಕಿಮಿಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಆಅಣೆವಾರಿ ಪ್ರಕಾರ 24 ಜಿಲ್ಲೆಗಳಲ್ಲಿ ಭೂಕಂದಾಯ ಮನ್ನ ಮಾಡಲು ಕ್ರಮ ವಹಿಸಲಾಗಿದೆ.

ಅನುಬಂಧ-2

ರಾಜ್ಯದಲ್ಲಿ ಸ್ಥಾಪನೆಯಾದ ಗೋಶಾಲೆ ಮತ್ತು ಮೇವಿನ ಬ್ಯಾಂಕ್‌ಗಳ ವಿವರ

ದಿನಾಂಕ : 23.7.2012 ವಾರಂತ್ಯಕ್ಕೆ

ಕ್ರಮ ಸಂಖ್ಯೆ	ಜಿಲ್ಲೆ	ಗೋಶಾಲೆಗಳ ಸಂಖ್ಯೆ	ಗೋಶಾಲೆಯಲ್ಲಿರುವ ಜಾನುವಾರುಗಳ ಸಂಖ್ಯೆ	ಮೇವಿನ ಬ್ಯಾಂಕ್‌ಗಳ ಸಂಖ್ಯೆ
1	ಬೆಳಗಾವಿ	37	34346	
2	ಬಿಜಾಪುರ	15	11386	
3	ಚಾಮರಾಜನಗರ			3
4	ಚಿತ್ರದುರ್ಗ	4	3260	
5	ಚಿಕ್ಕಬಳ್ಳಾಪುರ	1	1300	15
6	ಧಾರವಾಡ	1	93	2
7	ದಾವಣಗೆರೆ	1	440	
8	ಗದಗ	5	621	
9	ಕೊಪ್ಪಳ	20	28399	
10	ಮೈಸೂರು			3
11	ರಾಯಚೂರು	5	310	19
12	ಬಾಗಲಕೋಟೆ	3	5168	
13	ಯಾದಗಿರಿ	1	26	10
14	ಗುಲಬರ್ಗಾ	2	426	15
15	ಬೀದರ್			30
	ಒಟ್ಟು	**95**	**85775**	**97**

ಮಾಹೆವಾರು ಗೋಶಾಲೆಗಳನ್ನು ತೆರೆದಿರುವ ವಿವರ

	ಅಕ್ಟೋಬರ್	ನವೆಂಬರ್	ಡಿಸೆಂಬರ್	ಜನವರಿ	ಫೆಬ್ರವರಿ	ಮಾರ್ಚ್	ಏಪ್ರಿಲ್
ಗೋಶಾಲೆಗಳು	15	12	13	31	25	44	55
ಸಂರಕ್ಷಿಸಿದ ಜಾನುವಾರುಗಳು	9627	2649	8066	13470	16441	26098	24573

	ಮೇ	ಜೂನ್	ಜುಲೈ 23ಕ್ಕೆ
ಗೋಶಾಲೆಗಳು	71	76	95
ಸಂರಕ್ಷಿಸಿದ ಜಾನುವಾರುಗಳು	26009	48253	85775

ವಿದ್ಯುತ್ ಪೂರೈಕೆ:

ಪ್ರಸಕ್ತ ಸಾಲಿನಲ್ಲಿ 19,685 ವಿದ್ಯುತ್ ಪರಿವರ್ತಕಗಳು ಕೆಟ್ಟುಹೋಗಿದ್ದು, 18,611 ಪರಿವರ್ತಕಗಳನ್ನು ಬದಲಿಸಿ ಸಮರ್ಪಕ ವಿದ್ಯುತ್ ಪೂರೈಕೆಗೆ ಕ್ರಮ ವಹಿಸಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸುಟ್ಟು ಹೋಗಿರುವ ವಿದ್ಯುತ್ ಪರಿವರ್ತಕಗಳನ್ನು ತುರ್ತಾಗಿ ದುರಸ್ಥಿ ಮಾಡಲು ಆಯಾ ವಿದ್ಯುತ್ ಸರಬರಾಜು ನಿಗಮಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಪ್ರತಿ ಜಿಲ್ಲಾಧಿಕಾರಿಗೆ 1.50 ಕೋಟಿ ರೂ.ಗಳನ್ನು ಕುಡಿಯುವ ನೀರಿನ ಯೋಜನೆಗಳಿಗೆ ಠೇವಣಿ ಮಾಡಲು ಅನುದಾನ ಒದಗಿಸಲು ಕ್ರಮ ವಹಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶದ ರೈತರಿಗೆ 3 ಫೇಸ್ ವಿದ್ಯುತ್‌ನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳು.

ಪ್ರಸ್ತುತ ರಾಜ್ಯದಲ್ಲಿ ವಿದ್ಯುತ್ ಪೂರೈಕೆಯಾಗುತ್ತಿರುವ ಅವಧಿಯ ವಿವರಗಳು

ಬೆಂಗಳೂರು ನಗರ : 24 ಗಂಟೆಗಳು

ಇತರೆ ನಗರ ಪ್ರದೇಶಗಳು : 20 ರಿಂದ 22 ಗಂಟೆಗಳು

ಗ್ರಾಮೀಣ ಪ್ರದೇಶಗಳು : 3 ಫೇಸ್ 5 ರಿಂದ 6 ಗಂಟೆಗಳು (ಬ್ಯಾಚ್‌ಗಳಲ್ಲಿ)

1 ಫೇಸ್ – ಸರಾಸರಿ 10 ಗಂಟೆಗಳು

ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗನುಗುಣವಾಗಿ ಹಾಗೂ ಜಲ ವಿದ್ಯುತ್ ಉತ್ಪಾದನೆಯಲ್ಲಿ ಕುಂಠಿತಗೊಂದಿರುವುದನ್ನು ಗಮನದಲ್ಲಿರಿಸಿ, ಹೆಚ್ಚುವರಿಯಾಗಿ **750** ಮೆ.ವ್ಯಾ. ವಿದ್ಯುತ್ ಖರೀದಿ ಮಾಡಲು ಯೋಚಿಸಲಾಗುತ್ತಿದೆ.

POWER PURCHASE COST FOR 2012-13

Sl. No.	Power purchases to be purchased in M/W	Average power purchase cost/unit in Rs. (Peak hour rate)	Hours of Power Purchase	Total cost/day in Rs. crore	Cost/month in Rs. crore
1	1280	4.41	24 hours	13.54	406
2	750	4.50	24 hours	8.1	243
3	200 (peak power)	5.30	6 hours	0.636	19.08

'Yet to be tendered, Cost is assumed.

Power Purchase cost incurred during April 12, May 12 and June 12

Particulars	April 12	May 12	June 12	Total
Quantum purchased in Mu	797.08	800.47	933.13	2530.68
Power purchase cost in Rs. Cr	385.52	380.84	392.67	1159.03

Short Term Power procurement (including procurement from outside states, cogen section - 11)

Year	Energy (Million Units)	Amount (Rs. crores)	
2007-08	40.50	28.51	
2008-09	1963.49	1327.43	
2009-10	1798.64	1041.06	
2010-11	7815.36	3898.68	
2011-12	6292.69 (1050 MW)	3019.68	
2012-13 (upto June 12)	2530.68 (1280 MW)	1159.03	4532.68
From July 12 onwards 1280 MW Round the clock	7650 (1280 MW)	3373.65	
From Sept-12 onwards 750 MW Round the clock	3780 (750 MW)	1701.00	1834.56
Peak Power 200 MW for 6 hours	1008 (200 MW)	133.56	
Total	**32879.36**	**15682.22**	
Source PCKL			

In addition to BTPS Unit 2 and UPCL Unit 2 will add 1100 *MW in 2012-13*. Expected in August 2012.

ಬೆಳೆ ವಿಮೆ ಬಗ್ಗೆ:

ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು ರೈತರಿಗೆ ಹವಾಮಾನ ವೈಪರಿತ್ಯಗಳಿಂದ ಬೆಳೆ ನಷ್ಟ ಉಂಟಾದರೆ ಅಂದರೆ, ಅತಿವೃಷ್ಟಿ, ಅನಾವೃಷ್ಟಿ, ಆರ್ದ್ರತೆ, ಗಾಳಿವೇಗ ಮತ್ತು ತಾಪ ಮಾನಗಳಿಂದ ರಕ್ಷಣೆ ನೀಡುತ್ತದೆ.

ಈ ಯೋಜನೆಯನ್ನು ಬೆಂಗಳೂರು (ಗ್ರಾ), ಬಾಗಲಕೋಟೆ, ಬೆಳಗಾವಿ, ಬೀದರ್, ಚಿಕ್ಕಮಗಳೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಕೋಲಾರ, ಕೊಪ್ಪಳ, ರಾಯಚೂರು, ರಾಮನಗರ ಮತ್ತು ಯಾದಗಿರಿ ಈ ಜಿಲ್ಲೆಗಳಲ್ಲಿ ಅಳವಡಿಸಲಾಗಿದೆ.

ಈ ಯೋಜನೆಯನು ರಾಗಿ, ಮುಸುಕಿನ ಜೋಳ, ಜೋಳ, ತೊಗರಿ, ಉದ್ದು, ಹೆಸರು, ಸೋಯಾ ಅವರೆ, ಸೂರ್ಯಕಾಂತಿ, ನೆಲಗಡಲೆ, ಈರುಳ್ಳಿ, ಹತ್ತಿ, ಆಲೂಗಡ್ಡೆ, ಮೆಣಸಿನಕಾಯಿ, ದ್ರಾಕ್ಷಿ ಮತ್ತು ಬಾಳೆ ಬೆಳೆಗಳಿಗೆ ಅಳವಡಿಸಲಾಗಿದೆ.

ರಾಷ್ಟ್ರೀಯ ಕೃಷಿ ಬೆಳೆ ವಿಮೆ ಯೋಜನೆಯಡಿ ಪಾಲ್ಗೋಳ್ಳಲು ಬೆಳೆ ಸಾಲ ಪಡೆಯದ ರೈತರಿಗೆ ಅಲ್ಪಾವಧಿ ಬೆಳೆಗಳಿಗೆ ಕೊನೆಯ ದಿನಾಂಕ 31–07–2012 ಹಾಗೂ ಬೆಳೆ ಸಾಲ ಪಡೆಯುವ ರೈತರಿಗೆ 30–09–2012 ಆಗಿರುತ್ತದೆ. ಬೆಳೆ ಸಾಲ ಪಡೆಯದ ರೈತರೂ ಸಹ ಪಾಲ್ಗೊಳ್ಳಲು ಕೊನೆಯ ದಿನಾಂಕವನ್ನು 30–09–2012 ವರೆವಿಗೆ ವಿಸ್ತರಿಸುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಪಾಲ್ಗೊಳ್ಳಲು ಬೆಳೆ ಸಾಲ ಪಡೆಯದ ರೈತರಿಗೆ ಕೊನೆಯ ದಿನಾಂಕ 30–6–2012, ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ 31–7–2012 ಆಗಿರುತ್ತದೆ. ಸದರಿ ಯೋಜನೆಗಳಡಿ ರಾಜ್ಯ ಸರ್ಕಾರದಿಂದ ನೀಡಬೇಕಾಗಿದ್ದ ರೂ. 39.50 ಕೋಟಿ ಅನುದಾನವನ್ನು ಭರಿಸಿ 2011ರ ಮುಂಗಾರು ಹಂಗಾಮಿನ ಪರಿಹಾರಗಳನ್ನು ಈಗಾಗಲೇ ಇತ್ಯರ್ಥಪಡಿಸಲಾಗಿದೆ.

ಸುವರ್ಣ ಭೂಮಿ ಯೋಜನೆ

ಸುವರ್ಣ ಭೂಮಿ ಯೋಜನೆ :

2011–12ನೇ ಸಾಲಿನಲ್ಲಿ ಒಟ್ಟು 6,90,127 ಫಲಾನುಭವಿಗಳಿಗೆ ವಿವಿಧ ಚಟುವಟಿಕೆಗಳಡಿ (ಕೃಷಿ – 345785 ಫಲಾನುಭವಿಗಳಿಗೆ ರೂ. 247.08 ಕೋಟಿ, ತೋಟಗಾರಿಕೆ – 231446 ಫಲಾನುಭವಿಗಳಿಗೆ ರೂ. 157.95 ಕೋಟಿ, ಜೈವಿಕ ಇಂಧನ – 8733 ಫಲಾನುಭವಿಗಳಿಗೆ ರೂ. 5.31 ಕೋಟಿ, ಸಾವಯವ ಕೃಷಿ – 61,353 ಫಲಾನುಭವಿಗಳಿಗೆ ರೂ. 44.62 ಕೋಟಿ, ಜೇನು ಸಾಕಾಣಿಕೆ – 4566 ಫಲಾನುಭವಿಗಳಿಗೆ ರೂ. 3.51 ಕೋಟಿ. ಮೀನುಗಾರಿಕೆ – 6934 ಫಲಾನುಭವಿಗಳಿಗೆ ರೂ. 4.41 ಕೋಟಿ. ರೇಷ್ಮೆ ಕೃಷಿ – 31318 ಫಲಾನುಭವಿಗಳಿಗೆ ರೂ. 11.97 ಕೋಟಿ) ಒಟ್ಟು ರೂ. 474.86 ಕೋಟಿಗಳ ಸಹಾಯಧನವನ್ನು ವಿತರಿಸಲಾಗಿದೆ. 2011–12ನೇ ಸಾಲಿನಲ್ಲಿ ಕೃಷಿ ಮತ್ತು ಸಾವಯವ ಕೃಷಿ ಚಟುವಟಿಕೆಗಳಿಗೆ ಬಾಕಿ ನೀಡಬೇಕಾಗಿದ್ದ 2ನೇ ಕಂತಿನ ಸಹಾಯಧನ ರೂ. 47.37 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

2012–13ನೇ ಸಾಲಿನಲ್ಲಿ ವಿವಿಧ ಚಟುವಟಿಕೆಗಳಡಿ ರೂ. 3,57,569 ಫಲಾನುಭವಿಗಳಿಗೆ ಒಟ್ಟು ರೂ. 395.42 ಕೋಟಿ ಅನುದಾನವನ್ನು ಒದಗಿಸಲಾಗಿದೆ. ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ಮುಂಗಾರು ಹಂಗಾಮಿಗೆ ಈವರೆಗೆ 150 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಲಾಗಿದೆ.

ರೈತರ ಆತ್ಮಹತ್ಯೆ:

ರೈತರ ಆತ್ಮಹತ್ಯೆಗೆ ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯೇ ಕಾರಣ ಎಂಬ ವಿಷಯವನ್ನು ಖಾತರಿ ಮಾಡಿಕೊಂಡು ದೃಢೀಕರಣ ಪತ್ರವನ್ನು ನೀಡಲು ಉಪ–ವಿಭಾಗಾಧಿಕಾರಿಯ ಅಧ್ಯಕ್ಷತೆಯಲ್ಲಿ ಸಮಿತಿಯನು ರಚಿಸಲಾಗಿದೆ. ಈ ಸಮಿತಿಯು 24 ಗಂಟೆಗಳ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ನಿವಾಸಕ್ಕೆ ಭೇಟಿ ನೀಡಿ ವಿಚಾರಣೆ ಮಾಡಿ ವರದಿ ನೀಡುತ್ತಾರೆ. ಪರಿಹಾರ ಮೊತ್ತವನ್ನು ಸಮಿತಿಯು ನೀಡುವ

ದೃಢೀಕರಣ ಪತ್ರವನ್ನು ಆಧರಿಸಿ ಕೃಷಿ ಇಲಾಖೆಯ ಆಯಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರುಗಳು ನೀಡುತ್ತಾರೆ.

ರೈತರ ನಿಲ್ಲದ ಆತ್ಮಹತ್ಯೆ ಪ್ರಕರಣಗಳನ್ನು ಗಮನಿಸಿ 2007–08ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ರೈತರ ನೇರವಾಗಿ ಅವರ ಸಂಕಷ್ಟಗಳನ್ನು ಅರಿಯಲು ದಿನಾಂಕ : 14–06–2007 ರಂದು ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ಇಲ್ಲಿ ಬಂದಂತಹ ಸಲಹೆ ಸೂಚನೆಗಳನ್ನು ಪರಿಶೀಲಿಸಿ ನಿವಾರಣೋಪಾಯಗಳ ಬಗ್ಗೆ ವರದಿ ನೀಡಲು ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯು ವರದಿ ನೀಡಿದೆ. ಈ ವರದಿಯನ್ವಯ ಹಲವಾರು ರೈತ ಪರ ಕಾರ್ಯಕ್ರಮಗಳನ್ನು ಆನುಷ್ಠಾನಗೊಳಿಸಲಾಗುತ್ತದೆ.

2011–12ರಲ್ಲಿ 187 ಪ್ರಕರಣಗಳು ವರದಿಯಾಗಿದೆ. 40 ಪ್ರಕರಣಗಳು ತಿರಸ್ಕೃತವಾಗಿವೆ. 68 ಪ್ರಕರಣಗಳಿಗೆ ಪರಿಹಾರ ನೀಡಲಾಗಿದೆ. 79 ಪ್ರಕರಣಗಳು ಸ್ಥಾಯಿ ಸಮಿತಿ ತೀರ್ಮಾನಿಸಬೇಕು.

2012–13ರಲ್ಲಿ 16 ಪ್ರಕರಣಗಳು ವರದಿಯಾಗಿದೆ. 0 ಪ್ರಕರಣಗಳು ತಿರಸ್ಕೃತವಾಗಿದೆ. 2 ಪ್ರಕರಣಗಳಿಗೆ ಪರಿಹಾರ ನೀಡಲಾಗಿದೆ. 14 ಪ್ರಕರಣಗಳು ಸ್ಥಾಯಿ ಸಮಿತಿ ತೀರ್ಮಾನಿಸಬೇಕು.

ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆ:

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ 2012–13ನೇ ಸಾಲಿಗೆ ರೂ. 2318.33 ಕೋಟಿಗಳ ಆಯವ್ಯಯವನ್ನು ಒದಗಿಸಲಾಗಿದ್ದು, ಜೂನ್–12 ರವರೆಗೆ ರೂ. 488.89 ಕೋಟಿಗಳಷ್ಟು ವೆಚ್ಚವಾಗಿರುತ್ತದೆ. ರಾಜ್ಯಾದ್ಯಂತ ಕೆಳಕಂಡ ತಾಲ್ಲೂಕುಗಳನ್ನು ಹೊರತು ಪಡಿಸಿ ಇತರೇ ತಾಲ್ಲೂಕುಗಳಲ್ಲಿ ಪಿಂಚಣಿಯನ್ನು ಜೂನ್–12 ರವರೆಗೆ ವಿತರಿಸಲಾಗಿದೆ.

1. ಗೌರಿಬಿದನೂರು
2. ಚಳ್ಳಕೆರೆ
3. ಹಿರಿಯೂರು
4. ಚಿತ್ರದುರ್ಗ

5. ಹೊಳಲ್ಕೆರೆ
6. ಹೊಸದುರ್ಗ
7. ಮೊಳಕಾಲ್ಮೂರು
8. ಸಾಗರ
9. ಹಾನಗಲ್
10. ಹುನಗುಂದ
11. ಅಫಜಲಪುರ
12. ಶಾಹಪುರ

ಸದರಿ ತಾಲ್ಲೂಕುಗಳಲ್ಲಿ ಮೇ–12 ರವರೆಗೆ ವಿತರಿಸಲಾಗಿರುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಬಯೋಮೆಟ್ರಿಕ್ ಆಧಾರಿತ ಸ್ಮಾರ್ಟ್ ಕಾರ್ಡ್ ವಿತರಣಾ ವ್ಯವಸ್ಥೆಯನ್ನು ಜಾರಿಗೆ ತರಲಾಗಿದ್ದು ಜೂನ್ ತಿಂಗಳ ಪಿಂಚಣಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳ ಸಹಭಾಗಿತ್ವದಲ್ಲಿ ವಿತರಿಸಲಾಗುತ್ತಿದೆ.

ಇನ್ನುಳಿದ ತಾಲ್ಲೂಕುಗಳಲ್ಲಿ ತಾಂತ್ರಿಕ ದೋಷಗಳಿಂದ ಪಿಂಚಣಿಯನ್ನು ವಿತರಿಸಿರುವುದಿಲ್ಲ. ಸದರಿ ಲೋಪದೋಷಗಳನ್ನು ಸರಿಪಡಿಸಿ ಪಿಂಚಣಿಯನ್ನು ವಿತರಿಸಲು ಸೂಕ್ತ ಕ್ರಮಗಳನ್ನು ಖಜಾನೆಯು ಕೈಗೊಂಡಿರುತ್ತದೆ.

Sl. No.	District	No. of Permission as on 1-2-2011	Sanctioned form 1-2-2011 till date	Cancellation upto June 12	No. of Cases received For restoration	Restored cases	Cases sent back for clarification	Not as on Today	Beneficiaries as per treasury	Beneficiaries as per Smart Card	Total
		A	B	C	D	E	F	G=A+B+E-C	H	I	J = H+I
1	BAGALKOT	147137	3401	32445	1734	1469	265	119562	116910		115910
2	BANUAALORE URBAN	252263	266	118248	1653	1314	339	135595	. 150436		150436
3	BANGALORE (RURAL)	84254	2847	14267	1470	981	489	. 73825	78075		78075
4	BELGAUM	361109	10308	117062	3720	3068	652	257423	245489		245489
5	BELLARY	148692	4906	20560	390	386	4	133424	136378	15000	151378
6	BIDAR	138249	3042	31750	2610	2174	436	111715	103736		103736
7	BIJAPUII	199977	2323	85436	5051	4254	797	121118	136283		136283
8	CHAMARAJANAGAR	114058	1495	6216	2390	1868	522	111205	106500	10082	116582
9	CHICKMAGALUR	63011	1745	9462	1129	881	248	56175	52774		52774
10	CHIKKABALLAPURA	94562	1326	19488	2724	2301	423	78701	79465		79465
11	CHITRADURGA	105319	8142	15413	3981	3336	645	101384	86836	1320	88156
12	DAVANAGERE	126263	5958	28258	5680	5473	207	109436	111191		111191
13	DHARWAG	116608	5327	10287	5675	4508	1167	116156	72386	37839	110235
14	GADAG	107768	4456	19867	176	142	34	92499	85289		85289
15	GULBARGA	170933	853	82676	27560	18077	0	107187	130892		130892

16	HASSAN	173769	798	18288	3651	3128	523	159407	150349		150349
17	HAVERI	146267	3769	31032	1839	1626	213	120630	111862		111862
18	KARWAR	63778	4882	8092	1561	1420	141	61988	60694		60694
19	KOLAR	137184	1704	19339	596	418	178	119967	118806		118806
20	KOPPAL	105351	2173	17571	260	244	16	90197	88435		88435
21	MADIKERI	29674	554	5076	327	271	56	25423	23211		32211
22	MANDYA	217024	4311	26380	2570	2084	486	197039	B211		189928
23	MAN GALORE	73527	7419	10544	371	349	22	70751	58313		68313
24	MYSORE	205983	5840	46015	711	636	75	166444	168031		168011
25	RAICHUR	129011	4798	51339	452	408	44	82878	76489		76489
26	RAMANAGARA	128693	1623	23287	854	810	44	107839	105894		106894
27	SHIMOGA	92358	2399	17875	1211	1058	153	77940	72346		72346
28	TUMKUR	208523	4116	52970	2447	1665	782	161334	156532		156532
29	UDUPI	71826	7283	3727	855	712	143	76094	69482		69482
30	YADGIR	71941	4901	14547	-	0	-	62295	55790		55790
	Total	**4085122**	**112965**	**957517**	**83648**	**65061**	**9104**	**3305631**	**3208802**	**64241**	**3273043**

ಮೋಡಬಿತ್ತನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮ

ಮೋಡಬಿತ್ತನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮ:

ಅತಿಯಾದ ವಿಳಂಬ ಮತ್ತು ಮುಂಗಾರು ಕುಂಠಿತದಿಂದಾಗಿ ಜಲಾನಯನ ಪ್ರದೇಶ ಹಾಗೂ ಮಳೆ ಆಧಾರಿತ ಪ್ರದೇಶಗಳಲ್ಲಿ ಬಿತ್ತನೆ ಮಾಡಲಾಗದೆ ಕೃಷಿ ಚಟುವಟಿಕೆಗಳು ನಿಂತಿರುತ್ತದೆ. ರಾಜ್ಯದಲ್ಲಿ ಮುಂಗಾರು ಮಳೆಯನ್ನು ನಿರೀಕ್ಷಿಸಿ ಈಗಾಗಲೇ ಮಾಡಿರುವ ಬಿತ್ತನೆಗಳು ವಿಫಲವಾಗುತ್ತದೆ.

ಮೇಲೆ ವಿವರಿಸಿರುವ ಗಂಭೀರ ಪರಿಸ್ಥಿತಿಯಲ್ಲಿ ಖರೀಫ್ ಋತುವಿನ ಕೃಷಿ ಚಟುವಟಿಕೆಗಳಿಗೆ ಅನುಕೂಲ ಮಾಡಲು ಮೋಡ ಬಿತ್ತನೆ ಕಾರ್ಯಾಚರಣ ಕೈಗೊಳ್ಳುವಂತೆ ಪ್ರತಿಪಕ್ಷದ ನಾಯಕರು, ರೈತರು ಹಾಗೂ ಜನ ಪ್ರತಿನಿಧಿಗಳು ಒತ್ತಾಯಿಸುತ್ತಿದ್ದಾರೆ. ಮೋಡ ಬಿತ್ತನೆ ಕಾರ್ಯಚರಣೆ ಕೈಗೊಳ್ಳಲು ಸಾಧ್ಯತೆಗಳ ಬಗ್ಗೆ ಪರಿಶೀಲಿಸಲು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 15–6–2012 ರಂದು ಸಭೆ ನಡೆಸಲಾಗಿದೆ. ಮಳೆಯ ವಿಫಲತೆಯು ಹೀಗೆ ಮುಂದುವರೆದಲ್ಲಿ ಮಾತ್ರ ಮೋಡ ಬಿತ್ತನೆ ಕೈಗೊಳ್ಳಬಹುದಾಗಿದೆಯೆಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಪ್ರಾಥಮಿಕ ಹಂತದಲ್ಲಿ ಪ್ರಾಯೋಗಿಕವಾಗಿ ಅತೀ ಬರ ಪೀಡಿತ 2 ಅಥವಾ 3 ಜಿಲ್ಲೆಗಳಲ್ಲಿ ಕೈಗೊಳ್ಳುವಂತೆ ಹಾಗೂ ಫಲಿತಾಂಶ ಪರಿಶೀಲಿಸಿದ ನಂತರ ಮುಂದೆ ಸೂಕ್ತ ತೀರ್ಮಾನ ಕೈಗೊಳ್ಳಬಹುದಾಗಿದೆಯೆಂದು ಅಂದಿನ ಮುಖ್ಯ ಮಂತ್ರಿಗಳು ನಿರ್ದೇಶನ ನೀಡಿರುತ್ತಾರೆ.

ತದನಂತರ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ : 13–7–2012 ರಂದು ಪರಿಶೀಲನಾ ಸಭೆ ಕೈಗೊಂಡಿದ್ದು, ಮೋಡ ಬಿತ್ತನೆ ಬಗ್ಗೆ ಚರ್ಚೆಯ ಸಂದರ್ಭದಲ್ಲಿ ಯಾವುದೇ ಸಮಯದಲ್ಲಿ ಮೋಡ ಬಿತ್ತನೆ ಕೈಗೊಳ್ಳುವ ಸಲುವಾಗಿ ಸಂಪುಟ ಸಭೆಯ ಅನುಮೋದನೆ ಪಡೆಯಲು, ಪ್ರಸ್ತಾವನೆ

ಸಿದ್ಧಪಡಿಸಲು, ಮೋಡ ಬಿತ್ತನೆ ಕಾರ್ಯಾಚರಣೆಗೊಳಿಸಲು ಅವಶ್ಯ ಟೆಂಡರ್ ದಾಖಲೆಗಳನ್ನು ಸಿದ್ಧಪಡಿಸಲು ಸೂಚನೆ ನೀಡಿರುತ್ತಾರೆ.

ಮುಂದುವರೆದಂತೆ, ಮಾನ್ಯ ಜಲ ಸಂಪನ್ಮೂಲ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ್ದು ಹವಾಮಾನ ವಿಜ್ಞಾನಿಗಳ ಅಂದಾಜಿನ ಪ್ರಕಾರ ಜುಲೈ ಅಂತ್ಯದವರೆಗೆ ಮಳೆ ಬರುವುದಿಲ್ಲವೆಂದು ತಿಳಿಸಿರುವ ಕಾರಣ ಮೋಡಬಿತ್ತನೆ ಕಾರ್ಯಾಚರಣೆ ಕೈಗೊಳ್ಳಲು ತೀರ್ಮಾನಿಸಲಾಯಿತು. ರೂ. 5 ಕೋಟಿ ವೆಚ್ಚದಲ್ಲಿ ಮೋಡ ಬಿತ್ತನೆಯನ್ನು ಪ್ರಾಯೋಗಿಕವಾಗಿ ಮಾಡಲು ಸರ್ಕಾರ ತೀರ್ಮಾನಿಸಿದೆ. ಈ ಬಗ್ಗೆ ಪರಿಣಿತರಿಂದ ಪರಿಶೀಲಿಸಿ, ಕಾರ್ಯಾಚರಣೆ ಮಾಡಲು ತೀರ್ಮಾನಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಕೆರೆ ಹೂಳು ತೆಗೆಯಲು ಕಾರ್ಯ ಯೋಜನೆ ರೂಪಿಸಲು ತೀರ್ಮಾನಿಸಲಾಗಿದೆ.

ಗ್ರಾಮ ಪಂಚಾಯಿತಿಗೆ ಟೆಲಿ ಮೆಟ್ರಿಕ್ ರೈನ್ ಗೇಜ್ ಅಳವಡಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು

ಗ್ರಾಮ ಪಂಚಾಯಿತಿಗೆ ಟೆಲಿ ಮೆಟ್ರಿಕ್ ರೈನ್ ಗೇಜ್ ಅಳವಡಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು:

ರಾಜ್ಯದಲ್ಲಿ ಎಲ್ಲಾ 747 ಹೋಬಳಿಗಳಲ್ಲಿ 795 ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಟೆಲಿಮೆಟ್ರಿಕ್ ಮಳೆ ಮಾಪನಗಳು 135 ಹವಾಮಾನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದೆ.

ಪ್ರಸ್ತುತ ಸಾಲಿನಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 1086 ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳು ಮತ್ತು ಹೋಬಳಿ ಮಟ್ಟದಲ್ಲಿ 612 ಟೆಲಿಮೆಟ್ರಿಕ್ ಹವಾಮಾನ ಮಾಪನಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ. 10.00 ಕೋಟಿ ಮತ್ತು ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ. 6.63 ಕೋಟಿ ಅನುದಾನ ದೊರೆಯುವ ನಿರೀಕ್ಷೆಯಿದೆ, ಪ್ರಸ್ತಾವನೆಗಳನ್ನು ನೆರವಿಗಾಗಿ ಸಲ್ಲಿಸಲಾಗಿದೆ.

ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನಗೊಳಿಸುತ್ತಿದ್ದು ಆದರ ಫಲವಾಗಿ ಭದ್ರತೆ ಮತ್ತು ನೆಮ್ಮದಿಯ ಭಾವನೆಯನ್ನು ಅಸಹಾಯಕ ವೃದ್ಧರು, ವಿಧವೆಯರು ಹಾಗೂ ಅಂಗವಿಕಲರಲ್ಲಿ ಮೂಡಿದೆ.

ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ದಾಪ್ಯ ವೇತನ ರೂ.500/-	* 65 ವರ್ಷ ಭಾರತ ಸರ್ಕಾರ ರೂ. 200/- ಗಳು ರಾಜ್ಯ ಸರ್ಕಾರ ರೂ. 300.ಗಳು * 80 ವರ್ಷ ಮೇಲ್ಪಟ್ಟ ಫಲಾನುಭವಿಗಳಿಗೆ ರೂ. 500/- ಗಳು.
ನಿರ್ಗತಿಕ ವಿಧವಾ ವೇತನ ರೂ. 400/-	* ಭಾರತ ಸರ್ಕಾರ 2 ಲಕ್ಷ ಫಲಾನುಭವಿಗಳಿಗೆ ರೂ. 300/- ಗಳಂತೆ ಭರಿಸುತ್ತದೆ.
ಅಂಗವಿಕಲ ವೇತನ ರೂ. 400, ರೂ. 1000/-	* ಭಾರತ ಸರ್ಕಾರ 56,000 ಫಲಾನುಭವಿಗಳಿಗೆ ರೂ. 300/- ಗಳಂತೆ ಭರಿಸುತ್ತದೆ.
ಸಂಧ್ಯಾ ಸುರಕ್ಷಾ ಯೋಜನೆ ರೂ. 500/-ಗಳು	* ರಾಜ್ಯ ಸರ್ಕಾರ ಯೋಜನೆಯಾಗಿರುತ್ತದೆ.
ಆದರ್ಶ ವಿವಾಹ ಯೋಜನೆ ರೂ. 10,000/-	* ರಾಜ್ಯ ಸರ್ಕಾರದ ಯೋಜನೆಯಾಗಿರುತ್ತದೆ.
ರಾಷ್ಟ್ರೀಯ ಕುಟುಂಬ ನೆರವು ಯೋಜನೆ ರೂ. 10,000/-	* ಭಾರತ ಸರ್ಕಾರದ ಯೋಜನೆಯಾಗಿರುತ್ತದೆ.
ಅಂತ್ಯ ಸಂಸ್ಕಾರ ಸಹಾಯ ಧನ ಯೋಜನೆ - ರೂ. 1000/-	* ಭಾರತ ಸರ್ಕಾರ ಸಹಭಾಗಿತ್ವದ ಯೋಜನೆಯಾಗಿರುತ್ತದೆ.
ಅಪಘಾತದಿಂದಿ ಸಾವು ರೂ. 75,000 ಶಾಶ್ವತ ಅಂಗವೈಕಲತೆ ರೂ. 75,000	* ಭಾರತ ಸರ್ಕಾರ ಸಹಭಾಗಿತ್ವದ ಯೋಜನೆಯಾಗಿರುತ್ತದೆ.

2011–12ನೇ ಸಾಲಿನ ಸಾಮಾಜಿಕ ಭದ್ರತೆ ಯೋಜನೆಗಳ ಭೌತಿಕ ಮಾತ್ತು ಆರ್ಥಿಕ ಪ್ರಗತಿ

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಫಲಾನುಭವಿಗಳ ಸಂಖ್ಯೆ	ಆಯವ್ಯಯದಲ್ಲಿ ಬಿಡುಗಡೆಯಾದ ಅನುದಾನ ರೂ.ಕೋಟಿಗಳಲ್ಲಿ	ಮಾರ್ಚ್–12 ವರೆಗಿನ ವೆಚ್ಚ ರೂ.ಕೋಟಿಗಳಲ್ಲಿ	ಶೇಕಡವಾರು ವೆಚ್ಚ
1	ಸಂಧ್ಯಾ ಸುರಕ್ಷಾ ಯೋಜನೆ	1129913	751.56	730.98	97.26%
2	ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ	571984	408.50	400.85	98.12%
3	ನಿರ್ಗತಿಕ ವಿಧವಾ ವೇತನ	936125	597.80	597.80	100%
4	ಅಂಗವಿಕಲ ಮಾಶಾಸನ	552891	574.54	514.20	89.49%
5	ಆದರ್ಶ ವಿವಾಹ ಯೋಜನೆ	1470	4.00	3.19	79.75%
6	ರಾಷ್ಟ್ರೀಯ ಕುಟುಂಬ ನೆರವು ಯೋಜನೆ	1730	35.00	31.01	88.6%
7	ಅಂತ್ಯ ಸಂಸ್ಕಾರ ಸಹಾಯ ಧನ ಯೋಜನೆ	8600			
8	ಆಮ್ ಆದ್ಮಿ ಭೀಮಾ ಯೋಜನೆ	7,11,500	10.00	7.26	72.65%
	ಒಟ್ಟು		**2471.40**	**2285.30**	**92.46%**

ಸಾಮಾಜಿಕ ಭದ್ರತಾ ಯೋಜನೆಗಳ ಭೌತಿಕ ಪ್ರಗತಿ

ಫಲಾನುಭವಿಗಳ ಸಂಖ್ಯೆ

ಸಂಖ್ಯೆ ಲಕ್ಷಗಳಲ್ಲಿ



ಪ್ರಸಕ್ತ ಸಾಲಿನ ಸಾಮಾಜಿಕ ಭದ್ರತೆ ಯೋಜನೆಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ – ಜೂನ್ 2012 ರವರೆಗೆ

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಫಲಾನುಭವಿಗಳ ಸಂಖ್ಯೆ	ಆಯವ್ಯಯದಲ್ಲಿ ಬಿಡುಗಡೆಯಾದ ಅನುದಾನ ರೂ.ಕೋಟಿಗಳಲ್ಲಿ	ಜೂನ್–12 ವರೆಗಿನ ವೆಚ್ಚ ರೂ.ಕೋಟಿಗಳಲ್ಲಿ	ಶೇಕಡವಾರು ವೆಚ್ಚ
1	ಸಂಧ್ಯಾ ಸುರಕ್ಷಾ ಯೋಜನೆ	1154489	715.00	163.37	23%
2	ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ	579314	701.37	78.20	11.14%
3	ನಿರ್ಗತಿಕ ವಿಧವಾ ವೇತನ ಯೋಜನೆ	952907	479.56	133.38	27.81%
4	ಅಂಗವಿಕಲ ಮಾಶಾಸನ	561423	422.40	113.94	26.97%
	ಒಟ್ಟು		**2318.33**	**488.89**	**21.08%**

ಭೌತಿಕ ಪರಿಶೀಲನಾ ಕಾರ್ಯ

- ವಿವಿಧ ಸಾಮಾಜಿಕ ಭದ್ರತಾ ಯೋಜನೆಯಡಿ ಫಲಾನುಭವಿಗಳ ಸಂಖ್ಯೆಯ 2006-07ರಲ್ಲಿ 16 ಲಕ್ಷಗಳಿಂದ 2010-11ಕ್ಕೆ 40.88 ಲಕ್ಷಗಳಿಗೆ ಏರಿಕೆ ಕಂಡಿರುತ್ತದೆ.
- ಫಲಾನುಭವಿಗಳಿಗೆ ಮಾಸಿಕ ಪಿಂಚಣಿ ಹಣವನ್ನು ಸೂಕ್ತ ಹಾಗೂ ಪಾರದರ್ಶಕ ರೀತಿಯಿಂದ ಅವರ ಮನೆ ಬಾಗಿಲಿಗೆ ತಲುಪಿಸುವ ದೃಷ್ಟಿಯಿಂದ, ಸರ್ಕಾರವು ಮಾಹಿತಿ ತಂತ್ರಜ್ಞಾನ ಆಧಾರಿತ ವಿತರಣಾ ವ್ಯವಸ್ಥೆಯನ್ನು ಜಾರಿಗೆ ತರಲು ಯೋಚಿಸಿದ್ದು, ಫಲಾನುಭವಿಗಳ ಭಾವಚಿತ್ರ ಹಾಗೂ ಬೆರಳಚ್ಚು ಹೊಂದಿರುವ ಸ್ಮಾರ್ಟ್ ಕಾರ್ಡ್‌ನ್ನು ಫಲಾನುಭವಿಗಳಿಗೆ ನೀಡಲಾಗುವುದು.
- ಇದಕ್ಕಾಗಿ ಫಲಾನುಭವಿಗಳ ಅತ್ಯಂತ ನಿಖರವಾದ ಮಾಹಿತಿಯು ಅತ್ಯಗತ್ಯ. ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಇರುವ ಫಲಾನುಭವಿಗಳ ನಿಖರ ಹಾಗೂ ಕರಾರುವಕ್ಕಾದ ಮಾಹಿತಿಯನ್ನು ಗಣಕೀಕರಣಗೊಳಿಸಲು ಹಾಗೂ ವ್ಯವಸ್ಥೆಯಲ್ಲಿ ಭೌತಿಕವಾಗಿ ಇರದ ಫಲಾನುಭವಿಗಳನ್ನು ತೆಗೆದುಹಾಕಲು ಹಾಲಿ ಖಜಾನೆ ಇಲಾಖೆಯ ಮೂಲಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಭೌತಿಕ ಪರಿಶೀಲನಾ ಕಾರ್ಯವನ್ನು ಕೈಗೆತ್ತಿಗೊಳ್ಳಲಾಗಿದ್ದು, ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ.

ಆಸರೆ ಯೋಜನೆ:

2009ರಲ್ಲಿ ಪ್ರವಾಹ ಸಂತ್ರಸ್ಥರಿಗೆ ಶಾಶ್ವತ ಪುನರ್ ವಸತಿ ಕಲ್ಪಿಸುವ ದೃಷ್ಟಿಯಿಂದ ಆಸರೆ ಯೋಜನೆಯಡಿ ಗ್ರಾಮಗಳನ್ನು ಸ್ಥಳಾಂತರಿಸುವ ಕಾರ್ಯ ಕೈಗೊಂಡಿದ್ದು ಪ್ರಗತಿ ವಿವರ ಈ ಕೆಳಕಂಡಂತಿದೆ.

ಸ್ಥಳಾಂತರಗೊಳ್ಳುತ್ತಿರುವ ಒಟ್ಟು ಗ್ರಾಮಗಳು – 289

ಭಾಗಶಃ ಸ್ಥಳಾಂತರಗೊಳ್ಳುತ್ತಿರುವ ಒಟ್ಟು ಗ್ರಾಮಗಳು – 140

ಪೂರ್ಣ ಸ್ಥಳಾಂತರಗೊಳ್ಳುತ್ತಿರುವ ಒಟ್ಟು ಗ್ರಾಮಗಳು – 149
ಒಟ್ಟು ಮನೆಗಳ ಸಂಖ್ಯೆ – 57389
ಕಟ್ಟಡ ಪ್ರಾರಂಭಗೊಂಡಿರುವ ಮನೆಗಳ ಸಂಖ್ಯೆ – 56377
ತಳಪಾಯ ಹಂತ – 2388
ಸಜ್ಜಾ ಹಂತ – 1512
ಮೇಲ್ಛಾವಣಿ ಹಂತ – 1339
ಪೂರ್ಣಗೊಂಡಿರುವ ಮನೆಗಳ ಸಂಖ್ಯೆ – 47863
ಫಲಾನುಭವಿಗಳಿಗೆ ಹಸ್ತಾಂತರಿಸಿರುವ ಗ್ರಾಮಗಳ ಸಂಖ್ಯೆ – 151
ಫಲಾನುಭವಿಗಳಿಗೆ ಹಸ್ತಾಂತರಿಸಿರುವ ಮನೆಗಳ ಸಂಖ್ಯೆ – 27526
ಹಸ್ತಾಂತರಿಸಲು ಸಿದ್ಧಗೊಂಡಿರುವ ಮನೆಗಳ ಸಂಖ್ಯೆ – 20337
(ಈ ತಿಂಗಳ ಅಂತ್ಯದೊಳಗೆ ಹಸ್ತಾಂತರಿಸಲು ತೀರ್ಮಾನಿಸಿದೆ).

ರಾಜ್ಯ ಸರ್ಕಾರವು ದಿನಾಂಕ : 23–7–2012ರಂದು 19 ತಾಲ್ಲೂಕುಗಳನ್ನು ಬರ–ಪೀಡಿತವೆಂದು ಘೋಷಣೆ ಮಾಡಿರುವ ಬಗ್ಗೆ.

ರಾಜ್ಯ ಸರ್ಕಾರವು ದಿನಾಂಕ : 23–7–2012ರಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೆಳಕಂಡ 19 ತಾಲ್ಲೂಕುಗಳನ್ನು ಬರ–ಪೀಡಿತವೆಂದು ಘೋಷಣೆ ಮಾಡಿದೆ

ಕ್ರಮ.ಸಂ.	ಜಿಲ್ಲೆ	ತಾಲ್ಲೂಕು
1	ಬೆಂಗಳೂರು ನಗರ	1. ಆನೇಕಲ್ 2. ಬೆಂಗಳೂರು ಉತ್ತರ 3. ಬೆಂಗಳೂರು ದಕ್ಷಿಣ 4. ಬೆಂಗಳೂರು ಪೂರ್ವ
2	ಬೆಂಗಳೂರು ಗ್ರಾಮಾಂತರ	5. ಹೊಸಕೋಟೆ 6. ನೆಲಮಂಗಲ
3	ರಾಮನಗರ	7. ರಾಮನಗರ
4	ಕೋಲಾರ	8. ಮಾಲೂರು
5	ದಾವಣಗೆರೆ	9. ಚೆನ್ನಗಿರಿ 10. ಹರಿಹರ

6	ಮೈಸೂರು	11. ಹೆಗ್ಗಡದೇವನ ಕೋಟೆ 12. ಹುಣಸೂರು
7	ಬೆಳಗಾವಿ	13. ಗೋಕಾಕ
8	ಶಿವಮೊಗ್ಗ	14. ಶಿಕಾರಿಪುರ 15. ಶಿವಮೊಗ್ಗ 16. ಭದ್ರಾವತಿ
9	ಚಿಕ್ಕಮಗಳುರು	17. ಚಿಕ್ಕಮಗಳೂರು 18. ತರೀಕೆರೆ
10	ಹಾಸನ	19. ಆಲೂರು

ರಾಜ್ಯ ಸರ್ಕಾರವು ವಿವಿಧ ಇಲಾಖೆಯಡಿ ಬರ–ಪರಿಹಾರಕ್ಕೆ ಬಿಡುಗಡೆ ಮಾಡಿರುವ ಅನುದಾನ ವಿವರ

ದಿನಾಂಕ 24.7.2012 ರಂತೆ

ಕಂದಾಯ ಇಲಾಖೆ:

ಎನ್.ಡಿ.ಆರ್.ಎಫ್. ನಿಧಿಯಿಂದ 2012–13ಕ್ಕೆ ಬಿಡುಗಡೆಯಾದ ಅನುದಾನ

ಕೇಂದ್ರದ ಪಾಲು – ರೂ. 66.55 ಕೋಟಿ (ಮೊದಲನೆ ಕಂತು)

ರಾಜ್ಯದ ಪಾಲು – ರೂ 22.18 ಕೋಟಿ (ಮೊದಲನೆ ಕಂತು)

ಒಟ್ಟು – ರೂ. 88.73 ಕೋಟಿ

ಜಿಲ್ಲಾಧಿಕಾರಿಗಳಿಗೆ

ಬಿಡುಗಡೆಯಾದ ಹಣ – 40.84 ಕೋಟಿ

ಎಸ್.ಡಿ.ಆರ್.ಎಫ್. ನಿಂದ ಬಿಡುಗಡೆಯಾದ

ಅನುದಾನ 2012–13ಕ್ಕೆ – 352.58 ಕೋಟಿ (ರೂ. 70.23 ಕೋ. + 282.35 ಕೋ.)

ಬಿಡುಗಡೆಯಾದ ಅನುದಾನ – 233.00 ಕೋಟಿ

ಲಭ್ಯವಿರುವ ಅನುದಾನ – 167.40 ಕೋಟಿ

ಆರ್.ಡಿ.ಪಿ.ಆರ್. ಇಲಾಖೆ:

ಗ್ರಾಮೀಣ ಪ್ರದೇಶದಲ್ಲಿನ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಸಂಬಂಧ ರೂ. 346.00 ಕೋಟಿಗಳ ಕ್ರಿಂಯಾ ಯೋಜನೆ ಆನುಮೋದಿಸಲಾಗಿದ್ದು ರೂ. 59.38 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ.

ರಾಜ್ಯ ಸರ್ಕಾರವು ವಿವಿಧ ಇಲಾಖೆಯಡಿ ಬರ-ಪರಿಹಾರಕ್ಕೆ ಬಿಡುಗಡೆ ಹಾಗೂ ಖರ್ಚು ಮಾಡಿರುವ ಅನುದಾನ ವಿವರ

ದಿನಾಂಕ 24.7.2012 ರಂತೆ

1) ಕಂದಾಯ ಇಲಾಖೆ:

ಎಸ್.ಡಿ.ಆರ್.ಎಫ್. ನಿಧಿಯಿಂದ

2010-11 ರಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿನ ಬಾಕಿ	- 151.82 ಕೋಟಿ
2011-12 ರ ಸಾಲಿನಲ್ಲಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಹಣ	- 182.25 ಕೋಟಿ
2012-13 ರ ಸಾಲಿನಲ್ಲಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಹಣ	- 277.50 ಕೋಟಿ
ಒಟ್ಟು	**- 611.57 ಕೋಟಿ**
ಜಿಲ್ಲಾಧಿಕಾರಿಗಳು ಖರ್ಚು ಮಾಡಿದ ಹಣ 2011-12	- 158.59 ಕೋಟಿ
ಜಿಲ್ಲಾಧಿಕಾರಿಗಳು ಖರ್ಚು ಮಾಡಿದ ಹಣ 2012-13	- 144.88 ಕೋಟಿ
ಒಟ್ಟು	**- 303.47 ಕೋಟಿ**

ದಿನಾಂಕ 21.7.2012ರ ವಾರಾಂತ್ಯಕ್ಕೆ ಜಿಲ್ಲಾಧಿಕಾರಿಗಳು ಪಿ.ಡಿ. ಖಾತೆಯಲ್ಲಿ ಲಭ್ಯವಿರುವ ಹಣ

*ವಿವಿಧ ಕಾಮಗಾರಿಗಳಿಗೆ ನೀಡಿದ್ದು, ಉಳಿದ ಮೊತ್ತ ಖರ್ಚಾಗುವ ಹಂತದಲ್ಲಿದೆ

(ಸೂಚನೆ : ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ರೂ. 200 ಕೋಟಿಗಳು ಪಿ.ಡಿ. ಖಾತೆಗೆ ಜಮಾ ಆಗಬೇಕಿದೆ. ಪ್ರಸ್ತುತ ಅಧಿವೇಶನದಲ್ಲಿ ಆಯವ್ಯಯ ಮಂಜೂರಾದ ನಂತರ ಜಮೆ ಆಗುವುದು)

2) ಆರ್.ಡಿ.ಪಿ.ಆರ್. ಇಲಾಖೆ:

ಗ್ರಾಮೀಣ ಪ್ರದೇಶದಲ್ಲಿನ ತುರ್ತು-ಕುಡಿಯುವ ನೀರಿನ ಕಾಮಗಾರಿಗಳಿಗೆ ಖರ್ಚು ಮಾಡಿದ ಹಣ (2011-12ನೇ ಸಾಲಿಗೆ)	- 175.00 ಕೋಟಿ
ಗ್ರಾಮೀಣ ಪ್ರದೇಶದಲ್ಲಿನ ತುರ್ತು-ಕುಡಿಯುವ ನೀರಿನ ಕಾಮಗಾರಿಗಳಿಗೆ ಖರ್ಚು ಮಾಡಿದ ಹಣ (2011-12ನೇ ಸಾಲಿಗೆ)	- 59.38 ಕೋಟಿ
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ, 2011-12ರಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ ರೂ. 1500 ಕೋಟಿ ಬಿಡುಗಡೆಯಾಗಿದ್ದು ಖರ್ಚು ಮಾಡಿದ ಹಣ	- 1181.53 ಕೋಟಿ
2012-13ರಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ ರೂ. 1846 ಕೋಟಿ ಬಿಡುಗಡೆಯಾಗಿದ್ದು ಖರ್ಚು ಮಾಡಿದ ಹಣ	- 377.46 ಕೋಟಿ

3) ಪಶು ಸಂಗೋಪನೆ ಇಲಾಖೆ:

ಇಲಾಖೆಯ ವಿಶೇಷ ಅನುದಾನದಡಿಯಲ್ಲಿ ನೀರಾವರಿ ಪ್ರದೇಶದಲ್ಲಿ ಮೇವನ್ನು ಬೆಳೆಸಲು, +ಮೇವಿನ ಬೀಜಗಳನ್ನು ಸರಬರಾಜು ಮಾಡಲು ಖರ್ಚು ಮಾಡಿದ ಹಣ	- 4.98 ಕೋಟಿ
ಕರ್ನಾಟಕ ಹಾಲು ಮಹಾಮಂಡಳಿ ವತಿಯಿಂದ ಪಸು ಆಹಾರವನ್ನು ರೈತರಿಗೆ ವಿತರಿಸಲು ಖರ್ಚು ಮಾಡಿದ ಹಣ	- 5.00 ಕೋಟಿ

4) ನಗರಾಭಿವೃದ್ಧಿ ಇಲಾಖೆ:

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಎಸ್.ಎಫ್.ಸಿ. ಅನುದಾನದಿಂದ

2011–12ನೇ ಸಾಲಿಗೆ ಖರ್ಚು ಮಾಡಿದ ಹಣ	– 10.00 ಕೋಟಿ
2012–13ನೇ ಸಾಲಿಗೆ ಖರ್ಚಮಾಡಿದ ಹಣ	– 24.00 ಕೋಟಿ
ಒಟ್ಟು	**– 34.00 ಕೋಟಿ**

ಒಟ್ಟು ಬರ–ಪರಿಹಾರಕ್ಕೆ ಬಿಡುಗಡೆ ಮಾಡಿದ ಮೊತ್ತ	– 4301.93 ಕೋಟಿ
ಒಟ್ಟು ಬರ–ಪರಿಹಾರಕ್ಕೆ ಖರ್ಚು ಮಾಡಿದ ಮೊತ್ತ	– 2140.82 ಕೋಟಿ

ರಾಜ್ಯದಲ್ಲಿನ ಬರ–ಪರಿಸ್ಥಿತಿಯಿಂದಾಗಿ ಕೇಂದ್ರ ಸರ್ಕಾರದ ನೆರವು ಕೋರಿ ದಿನಾಂಕ 17.7.2012 ರಂದು ಮನವಿ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ರೂ 2000 ಕೋಟಿ ರೂ.ಗಳ ಆರ್ಥಿಕ ಸಹಾಯ ಕೋರಿ ಮನವಿ ಸಲ್ಲಿಸಲಾಗಿದ್ದು ಆರ್ಥಿಕ ನೆರವನ್ನು ನಿರೀಕ್ಷಿಸಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರವು ಅಧ್ಯಯನ ತಂಡವನ್ನು ಆಗಸ್ಟ್ 2012 ರಲ್ಲಿ ಕಳುಹಿಸುವ ನಿರೀಕ್ಷೆ ಇದೆ.

ಸ.ಕೇ.ಮು, ಫ–2, ಬೆ–59, ಕಾ.ಸೂ. ಸಂ. 0 3429, ದಿನಾಂಕ : 18–10–2014, 350 ಪುಸ್ತಕಗಳು